# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮೇ 27, 2024

ಸಂಪುಟ : 51 ಸಂಚಿಕೆ : 13 ☎ 08192-254736 91642 99999 RNI No: 27369 ಪುಟ : 4 ರೂ : 5.00 www.janathavani.com janathavani@mac.com







## ದೇಶದ 37 ನಗರಗಳಲ್ಲಿ 45 ಡಿಗ್ರಿ ಸೆಲ್ಸಿಯಸ್ ತಾಪಮಾನ

ನವದೆಹಲಿ, ಮೇ 26 – ದೇಶದ ಸಾಕಷ್ಟು ಕಡೆಗಳಲ್ಲಿ ಬಿಸಿಗಾಳಿ ತೀವ್ರತೆ ಹೆಚ್ಚಾಗಿದ್ದು ವಿದ್ಯುತ್ ಬೇಡಿಕೆ ತೀವ್ರವಾಗಿ ಏರಿಕೆಯಾಗಿದೆ. ಮಹಾರಾಷ್ಟ್ರದ ಅಕೋಲಾದಲ್ಲಿ ತಾಪಮಾನದ ಕಾರಣದಿಂದಾಗಿ ಸಾರ್ವಜನಿಕವಾಗಿ ಹೆಚ್ಚು ಜನರು ಸೇರುವುದನ್ನು ನಿರ್ಬಂಧಿಸಲಾಗಿದ್ದು, 144ನೇ ಸೆಕ್ಷನ್ ವಿಧಿಸಲಾಗಿದೆ.

ರಾಜಸ್ಥಾನ, ಪಂಜಾಬ್, ಹರಿಯಾಣ, ಚಂಡೀಘಡ, ದೆಹಲಿ, ಉತ್ತರ ಪ್ರದೇಶ ಹಾಗೂ ಗುಜರಾತ್‌ಗಳಲ್ಲಿ ಕೆಂಪು ಎಚ್ಚರಿಕೆ ನೀಡಲಾಗಿದೆ.

ರಾಜಸ್ಥಾನದ ಫಲೋಡಿಯಲ್ಲಿ ತಾಪಮಾನ 49.8 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ನಿನ್ನೆ ಈ ನಗರದಲ್ಲಿ 50 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ದೇಶದ 37 ನಗರಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಟ್ಟದ ವಲಯವಾಗಿರುವ ಹಿಮಾಚಲ ಪ್ರದೇಶದಲ್ಲೂ ತಾಪಮಾನ ಏರಿಕೆಯಾಗಿದೆ. ಶಿಮ್ಲಾದಲ್ಲಿ ತಾಪಮಾನ 30.6 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ.

## 370ನೇ ವಿಧಿ ಬಗ್ಗೆ ಮಾತನಾಡುವುದು ಧರ್ಮ ಆಧರಿತ ಅಭಿಯಾನವೇ?



ನವದೆಹಲಿ, ಮೇ 26 - ಪ್ರತಿಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳು ದೊರೆಯಲಿವೆ. ವಿಪಕ್ಷಗಳು ತಮ್ಮ ಸೋಲನ್ನು ಮುಚ್ಚಿಟ್ಟುಕೊಳ್ಳಲು ಚುನಾವಣಾ ಆಯೋಗಕ್ಕೆ ಬಿಜೆಪಿ ವಿರುದ್ಧ ದೂರು ನೀಡುತ್ತಿವೆ ಎಂದು ಕೇಂದ್ರ ಸಚಿವ ಅಮಿತ್ ಷಾ ಹೇಳಿದ್ದಾರೆ.

ಖಾಸಗಿ ಸುದ್ದಿ ಸಂಸ್ಥೆಯೊಂದಕ್ಕೆ ಸಂದರ್ಶನ ನೀಡಿದ್ದ ಅವರು, ಬಿಜೆಪಿ ಧರ್ಮ ಆಧರಿತ ಚುನಾವಣಾ ಪ್ರಚಾರ ನಡೆಸುತ್ತಿಲ್ಲ. ಮುಸ್ಲಿಮರಿಗೆ ಮೀಸಲಾತಿ ನೀಡುವುದರ ವಿರುದ್ಧ ಅಭಿಯಾನ ನಡೆಸುತ್ತಿದ್ದೇವೆ. 370ನೇ ವಿಧಿ ರದ್ದತಿ ಹಾಗೂ ಏಕರೂಪ ನಾಗರಿಕ ಸಂಹಿತೆ ಜಾರಿಯ ಬಗ್ಗೆ ಜನರಿಗೆ ತಿಳಿಸುವುದು ಧರ್ಮ ಆಧರಿತ ಪ್ರಚಾರ ಎನ್ನುವುದಾದರೆ, ಬಿಜೆಪಿ ಅದನ್ನೇ ಮಾಡಲಿದೆ ಎಂದಿದ್ದಾರೆ.

ಮತದಾರರ ವಿವರ ಹಾಗೂ ಮತ ಯಂತ್ರಗಳ ಕುರಿತು ಚುನಾವಣಾ ಆಯೋಗವನ್ನು ಪ್ರತಿಪಕ್ಷಗಳು ಟೀಕಿಸುತ್ತಿರುವುದನ್ನು ತಳ್ಳಿ ಹಾಕಿದ ಅಮಿತ್ ಷಾ, ಚುನಾವಣಾ ಪ್ರಕ್ರಿಯೆಯಲ್ಲಿ ಬದಲಾವಣೆ ಆಗಿಲ್ಲ ಎಂದಿದ್ದಾರೆ. (2ನೇ ಪುಟಕ್ಕೆ)

# ಮಹಾಸಭಾದಿಂದ ಪ್ರತಿಭಾ ಪುರಸ್ಕಾರಕ್ಕೆ ಕೋಟಿ ರೂ.

## ಬಸವ ಜಯಂತಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಅಧ್ಯಕ್ಷ ಎಸ್ಸೆಸ್

ದಾವಣಗೆರೆ, ಮೇ 26- ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದಿಂದ ರಾಜ್ಯಾದ್ಯಂತ ಪ್ರತಿಭಾ ಪುರಸ್ಕಾರಕ್ಕಾಗಿ 1 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಶಾಸಕರೂ ಆದ ಶಾಮನೂರು ಶಿವಶಂಕರಪ್ಪ ಹೇಳಿದರು.

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದಿಂದ ನಗರದ ಬಿಐಇಟಿ ಕಾಲೇಜು ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರ ಭವನದಲ್ಲಿ ಭಾನುವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಬಸವ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಪಡೆದು ಮತ್ತಷ್ಟು ಉತ್ತಮವಾಗಿ ವಿದ್ಯಾಭ್ಯಾಸ ಪಡೆದು, ಜೀವನ ಉಜ್ವಲಗೊಳಿಸಿಕೊಳ್ಳಲಿ, ನಾಡಿಗೆ ಕೀರ್ತಿ ತರಲಿ ಎಂಬ ಉದ್ದೇಶದಿಂದ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದು ಹೇಳಿದರು.

ಹನ್ನೆರಡನೇ ಶತಮಾನದಲ್ಲಿಯೇ ಬಸವಣ್ಣನವರು ಸಮಾನತೆಗಾಗಿ ಶ್ರಮಿಸಿದರು. ಸಮಾಜವಾದ ಆಧಾರಿತ ವ್ಯವಸ್ಥೆ ಜಾರಿಗೆ ತರುವಲ್ಲಿ ಯಶಸ್ವಿ ಆಗಿದ್ದರು. ಮಹಿಳೆಯರಿಗೆ ಸಮಾನತೆ ನೀಡಿ ಅವರ ಗೌರವ ಹೆಚ್ಚಿಸಿದ ಕೀರ್ತಿ ಬಸವಣ್ಣನವರದ್ದು. ಇಂದಿನ ಸರ್ಕಾರ ಸಹ ಬಸವಣ್ಣನವರ ಮಾರ್ಗದರ್ಶನದಲ್ಲಿಯೇ ನಡೆಯುತ್ತಿದೆ ಎಂದು ಹೇಳಿದರು. ಅಂತಹ ಬಸವಣ್ಣನವರ ಜಯಂತಿಯನ್ನು ಆಚರಿಸುವ ಸೌಭಾಗ್ಯ ನಮ್ಮದಾಗಿದೆ ಎಂದು ಹೇಳಿದರು.

ಬಸವ ಮಾರ್ಗ ಸಂಪಾದಕ ವಿಶ್ವಾರಾಧ್ಯ ಸತ್ಯಂಪೇಟೆ ಅವರು, 'ಬಸವತತ್ವ;ಅನುಷ್ಠಾನದ ಮಾದರಿಗಳು' ಕುರಿತು ಉಪನ್ಯಾಸ ನೀಡುತ್ತಾ, ಬಸವ ತತ್ವವನ್ನು ಅನುಷ್ಠಾನಕ್ಕೆ ತರದೇ ನಾವು ದೇಶವನ್ನು ಗಂಡಾಂತರಕ್ಕೆ ತಳ್ಳುತ್ತಿದ್ದೇವೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಸ್ತುತ ದಿನಗಳಲ್ಲಿ ಸಮುದ್ರದ ಆಳಕ್ಕಿಳಿದು ನವಿಲುಗರಿ ನೆಟ್ಟು ಬರುವಂತಹ ಘಟನೆಗಳು ನಮ್ಮ ನಡುವೆ ನಡೆಯುತ್ತಿವೆ ಎಂದರೆ ನಾವು ಅಜ್ಞಾನಿಗಳೋ ? ವಿಜ್ಞಾನಿಗಳೋ? ಬಸವಾದಿ ಶರಣರ ಅನುಯಾಯಿಗಳೇ? ಎಂದು ಯೋಚಿಸಬೇಕಿದೆ ಎಂದರು.

ನಮ್ಮದು ವೈಜ್ಞಾನಿಕ ಧರ್ಮ. ಸ್ವಾಮೀಜಿಗಳ ಅಥವಾ ಮಠಾಧೀಶರ ಧರ್ಮವಲ್ಲ. ಯಾರು ನಮಗೆ ಅರಿವು, ಅನ್ನ, ಶಿಕ್ಷಣ ನೀಡುತ್ತಾರೋ ಅವರೇ ನಮಗೆ ಸ್ವಾಮೀಜಿಗಳು ಎಂದರು. ಬಸವ ತತ್ವ ಆಚರಿಸುವ ಕೆಲವರಷ್ಟೇ ಉತ್ತಮ ಸ್ವಾಮೀಜಿಗಳ ಹೊರತಾಗಿ ಬಹುತೇಕ ಮಠಾಧೀಶರು ರಾಜಕಾರಣಿಗಳಿಗಿಂತ ಹೆಚ್ಚು ಕೆಟ್ಟವರಾಗಿದ್ದಾರೆ. ಅವರಿಗೆ ಇಷ್ಟಲಿಂಗ, ಷಟ್‌ಸ್ಥಲ, ಪಂಚಾಚಾರ, ಲಿಂಗಪೂಜೆಯ ಅರಿವೇ ಇಲ್ಲ ಎಂದರು.

ವೈಭವದ ಪೂಜೆ ಲಿಂಗಾಯತರಿಗೆ ಅಗತ್ಯವಿಲ್ಲ. ಹಣದಿಂದ ನಮ್ಮ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ. ಬಸವ ತತ್ವ ಆಚರಣೆಯಿಂದ ಮಾತ್ರ ದೇವರನ್ನು ಮೆಚ್ಚಿಸಲು ಸಾಧ್ಯವಿದೆ. ವೇದ ಶಾಸ್ತ್ರಗಳನ್ನು ತಿರಸ್ಕರಿಸಿ ವಚನ ಪ್ರಜ್ಞೆಯಿಂದ ಮೇಲೇರಿದಾಗ ಮಾತ್ರ ನಾವು ಮನುಷ್ಯರಾಗುತ್ತೇವೆ ಎಂದು ಎಚ್ಚರಿಸಿದರು.

ವೇದ, ಶಾಸ್ತ್ರ, ಆಗಮ, ಪುರಾಣದಲ್ಲಿ ಹೆಣ್ಣು ಭೋಗದ ವಸ್ತು ಎಂದು ಹೇಳಿದ್ದಾರೆ. ಸುಳ್ಳನ್ನೇ ವಿಜೃಂಭಿಸುವ ಸನಾತನ ಪರಂಪರೆಗೆ ನಾವೆಲ್ಲಾ ಧೈರ್ಯವಾಗಿ ಧಿಕ್ಕಾರ ಹೇಳಬೇಕಿದೆ. ಬಸವಣ್ಣನವರು ತಿಳಿಸಿಕೊಟ್ಟ ಸತ್ಯವನ್ನು ಹೇಳಲು ಆರಂಭಿಸಬೇಕು ಎಂದು ಕರೆ ನೀಡಿದರು.

ನಮ್ಮೊಳಗಿರುವ ಮನುವಾದಿ ಮನಸ್ಸಿನ ಕಾರಣ ಇಂದು ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿವೆ. ಇತ್ತೀಚಿನ ಕೆಲ ಘಟನೆಗಳು ಇದಕ್ಕೆ ಕಾರಣ. ಮನುವಾದಿ ಮನಸ್ಸು ಸಾಯಬೇಕಾದರೆ ವಚನ ಸಾಹಿತ್ಯ ಓದಬೇಕು ಎಂದು ತಿಳಿಸಿದರು. ಬಸವಣ್ಣ ಎಂದರೆ ಒಬ್ಬ ವ್ಯಕ್ತಿ ಎಂಬುದೇ ಅನೇಕ ವರ್ಷಗಳ ಕಾಲ ಬಹಳ (2ನೇ ಪುಟಕ್ಕೆ)



### ಬಸವ ತತ್ವ, ಚಿಂತನೆಗಳನ್ನು ರೂಢಿಸಿಕೊಳ್ಳಬೇಕು

**ದಾವಣಗೆರೆಯಲ್ಲಿ ನಡೆದ ವೀರಶೈವ ಲಿಂಗಾಯತ ಮಹಾಸಭಾದ ಮಹಾ ಅಧಿವೇಶನದಲ್ಲಿ ಶಾಮನೂರು ಶಿವಶಂಕರಪ್ಪನವರು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸುವಂತೆ ಗುಡುಗಿದ ಪರಿಣಾಮ ಮುಖ್ಯಮಂತ್ರಿ ಸಿದ್ಧರಾಮಯ್ಯನವರು 'ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿದ್ದಾರೆ. ಆದರೆ ಅದು ಕೇವಲ ಘೋಷಣೆಗೆ ಸೀಮಿತವಾಗಬಾರದು. ಲಿಂಗಾಯತರು ಬಸವ ತತ್ವ, ಚಿಂತನೆಗಳನ್ನು ರೂಢಿಸಿಕೊಳ್ಳಬೇಕು ಎಂದು ಪತ್ರಕರ್ತ ವಿಶ್ವಾರಾಧ್ಯ ಸತ್ಯಂಪೇಟೆ ಹೇಳಿದರು.**

# ಚನ್ನಗಿರಿ ಠಾಣೆ ಪ್ರಕರಣ ಸಿ.ಐ.ಡಿ. ತನಿಖೆಗೆ



ದಾವಣಗೆರೆ, ಮೇ 26 - ಚನ್ನಗಿರಿ ಠಾಣೆಯಲ್ಲಿ ಆದಿಲ್ ಸಾವು ಸಂಭವಿಸಿದ ಹಾಗೂ ಉದ್ರಿಕ್ತಗುಂಪು ಪೊಲೀಸ್ ಠಾಣೆ ಧ್ವಂಸಗೊಳಿಸಿದ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ.

ಮಟ್ಕಾ ನಡೆಸುತ್ತಿದ್ದ ಆರೋಪದಲ್ಲಿ ಚನ್ನಗಿರಿ ಪೊಲೀಸರು ಆದಿಲ್ ಎಂಬ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಠಾಣೆಯಲ್ಲಿ ಆದಿಲ್ ಕುಸಿದು ಬಿದ್ದಿದ್ದು ಕೂಡಲೇ ಆತನನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಸಾವು ಸಂಭವಿಸಿತ್ತು. ನಂತರ ನೂರಾರು ಜನ ಪೊಲೀಸ್ ಠಾಣೆಗೆ ನುಗ್ಗಿ ದಾಂಧಲೆ ನಡೆಸಿ, ಆಸ್ಪತ್ರೆ ಮೇಲೆ ಕಲ್ಲು ತೂರಾಟ ನಡೆಸಿದ್ದರು. ವಾಹನಗಳು ಜಖಂ ಆಗಿದ್ದವು ಹಾಗೂ ಹಲವು ಪೊಲೀಸರು ಗಾಯಗೊಂಡಿದ್ದರು.

ಈ ಪ್ರಕರಣದ ತನಿಖೆಯನ್ನು ಇದೀಗ ಸಿಐಡಿ ಹೆಗಲಿಗೆ ನೀಡಲಾಗಿದ್ದು, ಶೀಘ್ರವೇ ಸಿಐಡಿ ಅಧಿಕಾರಿಗಳು ಪ್ರಕರಣದ ಮುಂದಿನ ತನಿಖೆ ಆರಂಭಿಸಲಿದ್ದಾರೆ. ಸಿ.ಐ.ಡಿ. ಅಧಿಕಾರಿಗಳು ಈಗಾಗಲೇ ಬಂದಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ. ಸದ್ಯ ಪ್ರಕರಣಕ್ಕೆ ಸಂಬಂಧಿಸಿದ್ದಂತೆ 25 ಆರೋಪಿಗಳನ್ನು ಬಂಧಿಸ ಲಾಗಿದೆ. ಅವರನ್ನು ನ್ಯಾಯಾಂಗ ಬಂಧನಕ್ಕೆ ವಹಿಸಲಾಗಿದೆ ಎಂದವರು ಹೇಳಿದ್ದಾರೆ.

### ಠಾಣೆ ಧ್ವಂಸ : 25 ಜನರ ಬಂಧನ

ದಾವಣಗೆರೆ, ಮೇ 26- ಚನ್ನಗಿರಿ ಪೊಲೀಸ್ ಠಾಣೆ ಧ್ವಂಸಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ 25 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಎಸ್ಪಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ಪೊಲೀಸ್ ಠಾಣೆ ಧ್ವಂಸ, ದೊಂಬಿ ಹಾಗೂ ಪೊಲೀಸ್ ವಶದಲ್ಲಿದ್ದ ಆದಿಲ್ ಸಾವಿನ ಕೇಸ್‌ಗೆ ಸಂಬಂಧಿಸಿದಂತೆ ಚನ್ನಗಿರಿ ಠಾಣೆಯಲ್ಲಿ ಒಟ್ಟು ಆರು ಪ್ರಕರಣಗಳು ದಾಖಲಾಗಿವೆ. ಈ ಪೈಕಿ ನಾಲ್ಕು ಪ್ರಕರಣಗಳಲ್ಲಿ 25 ಜನರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ ಎಂದವರು ಹೇಳಿದ್ದಾರೆ.

ಮಟ್ಕಾ ಜೂಜಾಟ ನಡೆಸುತ್ತಿದ್ದ ಆರೋಪದಲ್ಲಿ ವಿಚಾರಣೆಗಾಗಿ ಚನ್ನಗಿರಿ ಪೊಲೀಸರು ಆದಿಲ್‌ನನ್ನು ಶುಕ್ರವಾರ ಠಾಣೆಗೆ ಕರೆದುಕೊಂಡು ಬಂದಾಗ, ಆದಿಲ್ ಕುಸಿದು ಬಿದ್ದು ಮೃತಪಟ್ಟಿದ್ದರು.

ಆದಿಲ್ ಅವರದು ಲಾಕಪ್‌ಡೆತ್ ಎಂದು ಆರೋಪಿಸಿ ಮೃತನ ಸಂಬಂಧಿಕರು, ಸಮುದಾಯದವರು ಕಲ್ಲು ತೂರಾಟ ನಡೆಸಿ, ದಾಂಧಲೆ ಮಾಡಿದ್ದರಿಂದ 11 ಪೊಲೀಸರು ಗಾಯಗೊಂಡಿದ್ದರು. ಉದ್ರಿಕ್ತರ ಆಕ್ರೋಶಕ್ಕೆ ಪೊಲೀಸ್ ವಾಹನಗಳ ಜಖಂ ಹಾಗೂ ಕಲ್ಲು ತೂರಾಟದಿಂದ (2ನೇ ಪುಟಕ್ಕೆ)

## ರೆಮಲ್ ಚಂಡಮಾರುತ 1.10 ಲಕ್ಷ ಕರಾವಳಿಯ ಜನರ ಸ್ಥಳಾಂತರ

ಕೋಲ್ಕೊತಾ, ಮೇ 26 – ರೆಮಲ್ ಚಂಡಮಾರುತದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ ಸರ್ಕಾರ ಕಟ್ಟೆಚ್ಚರ ವಹಿಸಿದ್ದು, ಕರಾವಳಿ ವಲಯದಲ್ಲಿರುವ 1.10 ಲಕ್ಷ ಜನರನ್ನು ಸ್ಥಳಾಂತರಗೊಳಿಸಿದೆ.

ರಾಜ್ಯ ವಿಕೋಪ ದಳದ 16 ಬೆಟಾಲಿಯನ್‌ಗಳನ್ನು ಸನ್ನದ್ಧವಾಗಿರಿಸಲಾಗಿದೆ. ಕರಾವಳಿ ಪ್ರದೇಶದಲ್ಲಿ ಎನ್.ಡಿ.ಆರ್.ಎಫ್. ಸಿಬ್ಬಂದಿಯನ್ನೂ ನಿಯೋಜಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉನ್ನತ ಹಂತದ ಸಭೆ ನಡೆಸಿ, ಚಂಡಮಾರುತ ಎದುರಿಸುವ ಸಿದ್ಧತೆಯನ್ನು ಪರಿಶೀಲಿಸಿದ್ದಾರೆ. ಚಂಡಮಾರುತದ ಪರಿಸ್ಥಿತಿ ಗಮನಿಸಿ ನೆರವಿನ ಕ್ರಮ ತೆಗೆದುಕೊಳ್ಳುವಂತೆ ಗೃಹ ಸಚಿವಾಲಯಕ್ಕೆ ಸೂಚಿಸಿದ್ದಾರೆ.

# ನದಿಯಲ್ಲಿ ನೀರಿನ ಹರಿವು ಹೆಚ್ಚಳ



ಶಿವಮೊಗ್ಗ, ಮೇ 26 - ಜಿಲ್ಲೆಯಲ್ಲಿ ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದ್ದು, ಹೊನ್ನಾಳಿ ಸಮೀಪ ತುಂಗಭದ್ರಾ ನದಿಯಲ್ಲಿ ಭಾನುವಾರ ನೀರಿನ ಹರಿವು ಹೆಚ್ಚಾಗುತ್ತಿರುವುದು ಕಂಡು ಬಂತು. ಇದರಿಂದಾಗಿ ನದಿ ಪಾತ್ರದ ಜನರು ಸಂತಸಗೊಂಡಿದ್ದಾರೆ.

ಹಾವೇರಿ, ಗದಗ ಜಿಲ್ಲೆಗಳಿಗೆ ಕುಡಿಯುವ ಉದ್ದೇಶಕ್ಕೆ ಭದ್ರಾ ಜಲಾಶಯದಿಂದ ಮೇ 23 ರಿಂದ ಮೇ 28 ರವರೆಗೆ ನಿತ್ಯ 2 ಸಾವಿರ ಕ್ಯೂಸೆಕ್ಸ್ ನಂತೆ ಒಟ್ಟು 1 ಟಿಎಂಸಿ ನೀರು ಬಿಡುಗಡೆ ಮಾಡಲು ವಾರದ ಹಿಂದೆ ತೀರ್ಮಾನಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಆದರೀಗ ನದಿಯಲ್ಲಿ ಮಳೆ ನೀರು ಹೆಚ್ಚಾಗುತ್ತಿರುವ ಕಾರಣ ಜಲಾಶಯದಿಂದ 500 ಕ್ಯೂಸೆಕ್ಸ್ ನೀರನ್ನು ಮಾತ್ರ ನದಿಗೆ ಹರಿಸಲಾಗುತ್ತಿದೆ ಎನ್ನಲಾಗಿದೆ.

## 6ನೇ ಹಂತದಲ್ಲಿ ಶೇ.63.36ರಷ್ಟು ಮತದಾನ

ನವದೆಹಲಿ, ಮೇ 26 – ಆರನೇ ಹಂತದ ಲೋಕಸಭಾ ಚುನಾವಣೆಯಲ್ಲಿ ಶೇ.63.36ರಷ್ಟು ಮತದಾನವಾಗಿದೆ.

ಐದನೇ ಹಂತದ ಮತದಾನದಲ್ಲಿ ಅತಿ ಕಡಿಮೆ ಶೇ.62.2ರಷ್ಟು ಮತದಾನವಾಗಿತ್ತು.

ಆರನೇ ಹಂತದಲ್ಲಿ 58 ಕ್ಷೇತ್ರಗಳಿಗೆ ಮತದಾನ ನಡೆದಿತ್ತು.

ಇದುವರೆಗೂ ನಡೆದ ಚುನಾವಣೆಯಲ್ಲಿ ಒಟ್ಟು ಶೇ.64.4ರಷ್ಟು ಮತದಾನವಾಗಿದೆ.

## ಆರ್ಥಿಕತೆ ಬೆಳೆಯುತ್ತಿದ್ದರೆ ಜನರಿಗೆ ಏಕಿಲ್ಲ ಸಮೃದ್ಧಿ? : ಪ್ರಿಯಾಂಕ ಪ್ರಶ್ನೆ



ಫತೇಹ್‌ಘರ್ ಸಾಹಿಬ್, ಮೇ 26 - ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆ ಎನ್ನುವುದಾದರೆ, ಜನರ ಜೀವನದಲ್ಲಿ ಸಮೃದ್ಧಿ ಏಕಿಲ್ಲ? ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಪ್ರಶ್ನಿಸಿದ್ದಾರೆ.

ಪಂಜಾಬ್‌ನಲ್ಲಿ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಸುಳ್ಳು ಹೇಳುತ್ತಿದ್ದಾರೆ ಹಾಗೂ ಅಧಿಕಾರಕ್ಕಾಗಿ ಜನರಿಗೆ ಪೊಳ್ಳು ಭರವಸೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ದೇಶದಲ್ಲಿ 70 ಕೋಟಿ ಯುವಕರು ನಿರುದ್ಯೋಗಿಗಳಾಗಿದ್ದಾರೆ. ನಿರುದ್ಯೋಗ 45 ವರ್ಷಗಳಲ್ಲೇ ಅತಿ ಹೆಚ್ಚಾಗಿದೆ ಎಂದೂ ಅವರು ಆರೋಪಿಸಿದರು.

ಮೋದಿ ಸರ್ಕಾರದ ಆಡಳಿತದಲ್ಲಿ ಕೇಂದ್ರ ಸರ್ಕಾರದ 30 ಲಕ್ಷ ಹುದ್ದೆಗಳು ಖಾಲಿ ಇವೆ. ವೇದಿಕೆ ಮೇಲೆ ಮೋದಿ ಆರ್ಥಿಕತೆ ಬೆಳೆಯುತ್ತಿರುವ ಬಗ್ಗೆ ದೊಡ್ಡ ಹೇಳಿಕೆ ನೀಡುತ್ತಿದ್ದಾರೆ. ಹಾಗಿದ್ದರೆ ಜನರ ಜೀವನದಲ್ಲಿ ಏಕೆ ಪ್ರಗತಿಯಾಗುತ್ತಿಲ್ಲ? ನಮ್ಮ ಮಕ್ಕಳಿಗೆ ಏಕೆ ಕೆಲಸ ಸಿಗುತ್ತಿಲ್ಲ ಎಂದವರು ಪ್ರಶ್ನಿಸಿದರು.

ಹಣದುಬ್ಬರ ಏಕೆ ಏರುತ್ತಿದೆ? ಉಕ್ಕಿನ ಕಾರ್ಖಾನೆಗಳೇಕೆ ಮುಚ್ಚುತ್ತಿವೆ? ಜಿ.ಎಸ್.ಟಿ. ಹೇರಿಕೆ ಕಾರಣದಿಂದ ಔದ್ಯಮಿಕ ವಲಯ ಏಕೆ ದುರ್ಬಲವಾಗುತ್ತಿದೆ? ಮಧ್ಯಮ ವರ್ಗದವರಿಗೆ ಪರಿಹಾರ (2ನೇ ಪುಟಕ್ಕೆ)


### ಶ್ರೀಮತಿ ಗಂಗಮ್ಮ ನಿಧನ



ದಾವಣಗೆರೆ ಸಿಟಿ ವಿದ್ಯಾನಗರ, 3ನೇ ಮೇನ್, 2ನೇ ಬಸ್ ಸ್ಟಾಪ್,
ಕಸ್ತೂರಬಾ ಮಹಿಳಾ ಸಮಾಜದ ಹತ್ತಿರದ ವಾಸಿ
ದಿ.ಜಿ. ಸೋಮಶೇಖರ್ ಅವರ ಧರ್ಮಪತ್ನಿ

**ಶ್ರೀಮತಿ ಗಂಗಮ್ಮ (74)**

ಅವರು ದಿನಾಂಕ : 26.05.2024ರಂದು ಭಾನುವಾರ ಮಧ್ಯಾಹ್ನ 1 ಗಂಟೆಗೆ ನಿಧನರಾಗಿದ್ದಾರೆ. ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ದಿನಾಂಕ 27.05.2024ರಂದು ಸೋಮವಾರ ಬೆಳಿಗ್ಗೆ 9 ರಿಂದ 10 ರವರೆಗೆ ನಗರದ ಬಾಪೂಜಿ ಆಸ್ಪತ್ರೆಯಲ್ಲಿ ಹಾಗೂ ಮಧ್ಯಾಹ್ನ 2 ರಿಂದ 5 ರವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಮೃತರ ದೇಹವನ್ನು ಆಸ್ಪತ್ರೆಗೆ ದೇಹದಾನ ಮಾಡಲಾಗುತ್ತದೆ.

ಇಂತಿ ದುಃಖತಪ್ತ ಕುಟುಂಬ ವರ್ಗ : 86185 62909



# ಜಿಂಬಾಬ್ವೆ : ಹಣಕ್ಕಾಗಿ ನಡೆಯುತ್ತಿದೆ ಪ್ರಚಾರ !

ಹರಾರೆ, ಮೇ 26 - ದುಡ್ಡೇ ದೊಡ್ಡಪ್ಪ ಇಲ್ಲವೇ ಹಣ ಎಂದರೆ ಹೆಣವೂ ಬಾಯಿ ಬಿಡುತ್ತದೆ ಎಂಬ ಮಾತುಗಳನ್ನು ಎಲ್ಲರೂ ಕೇಳಿರುತ್ತಾರೆ. ಆದರೆ, ಜಿಂಬಾಬ್ವೆಯಲ್ಲಿ ಮಾತ್ರ ಜನರು ಹಣ ಪಡೆಯಲಿ ಎಂದು ಪ್ರಚಾರ ಮಾಡುವ ಪರಿಸ್ಥಿತಿ ಬಂದಿದೆ!

ಜಿಂಬಾಬ್ವೆಯು ಕಳೆದ ಏಪ್ರಿಲ್ ತಿಂಗಳಲ್ಲಿ ಜಿಂಬಾಬ್ವೆ ಗೋಲ್ಡ್ ಅಥವಾ ಜಿಗ್ ಎಂಬ ನೋಟುಗಳನ್ನು ಬಿಡುಗಡೆ ಮಾಡಿತ್ತು. ಈ ನೋಟಿನ ಪ್ರಚಾರಕ್ಕಾಗಿ ಗಾಯಕ ರಾಸ್ ಕ್ಯಾಲೆಬ್ ಅವರನ್ನು ಬಳಸಿಕೊಳ್ಳಲಾಗಿತ್ತು. ಇದಕ್ಕಾಗಿ ಕ್ಯಾಲೆಬ್ ಅವರಿಗೆ ಕಾರು ಹಾಗೂ 2 ಸಾವಿರ ಡಾಲರ್‌ಗಳ ಸಂಭಾವನೆ ನೀಡಲಾಗಿತ್ತು.

ಸಾಮಾನ್ಯವಾಗಿ ಹಣಕ್ಕಾಗಿ ಪ್ರಚಾರದ ಅಗತ್ಯವಿರುವುದಿಲ್ಲ. ಆದರೆ, ಜಿಂಬಾಬ್ವೆ ಕಳೆದ ಹದಿನೈದು ವರ್ಷಗಳಲ್ಲಿ ಆರನೇ ಬಾರಿ ನೋಟುಗಳನ್ನು ಬದಲಿಸುತ್ತಿದೆ. ಹೀಗಾಗಿ ಜನರು ಜಿಂಬಾಬ್ವೆ ನೋಟುಗಳ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ನೋಟಿನ ಸಮಸ್ಯೆ ಬಗೆಹರಿಸಲು ಹಾಗೂ ಹಣಕಾಸು ಬಿಕ್ಕಟ್ಟು ನಿವಾರಿಸಲು ಜಿಂಬಾಬ್ವೆ ಅಧ್ಯಕ್ಷ ಎಮರನ್ಸ್ ನಂಗಾಗ್ವೆ ಅವರು ಬಂಗಾರ ಬೆಂಬಲಿತ ಜಿಂಬಾಬ್ವೆ ಗೋಲ್ಡ್ ನೋಟುಗಳ ಬಿಡುಗಡೆ ಮಾಡಿದ್ದಾರೆ.

ಹೊಸ ನೋಟುಗಳ ಪ್ರಚಾರಕ್ಕಾಗಿ ಜಿಂಬಾಬ್ವೆಯ ರಿಸರ್ವ್ ಬ್ಯಾಂಕ್ ಹಾಗೂ ಆಡಳಿತಾರೂಢ ಝಾನು-ಪಿಎಫ್ ಪಕ್ಷಗಳು ಭರ್ಜರಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ.

ಇಷ್ಟಾದರೂ ಹೊಸ ನೋಟುಗಳು ಹಳೆಯ ನೋಟುಗಳಷ್ಟೇ ಸಮಸ್ಯೆ ಎದುರಿಸುತ್ತಿವೆ. ಜನ ಜಿಂಬಾಬ್ವೆ ನೋಟುಗಳ ಬದಲು ಅಮೆರಿಕದ ಡಾಲರ್‌ನಲ್ಲೇ ವ್ಯವಹರಿಸಲು ಬಯಸುತ್ತಿದ್ದಾರೆ. ಅಧಿಕೃತ ಮಾರುಕಟ್ಟೆಯಲ್ಲಿ ಜಿಗ್ ಮೌಲ್ಯ ಸ್ಥಿರವಾಗಿದೆ. ಆದರೆ, ಕಾಳಸಂತೆಯಲ್ಲಿ ಅದರ ಮೌಲ್ಯ ತೀವ್ರವಾಗಿ ಕುಸಿದಿದೆ. 17 ಜಿಗ್‌ಗೆ ಒಂದು ಡಾಲರ್‌ನಂತೆ ವಿನಿಮಯ ನಡೆಯುತ್ತಿದೆ.



## ಅಮೆರಿಕದ ಡಾಲರ್‌ಗೆ ಮಣೆ ಹಾಕುತ್ತಿರುವ ಜನ

ಹೀಗಾಗಿ ಅಧಿಕಾರಿಗಳು ಹೊಸ ನೋಟುಗಳ ಪಡೆಯಲು ಹಿಂಜರಿಯುತ್ತಿರುವವರ ವಿರುದ್ಧ ಬಲಪ್ರಯೋಗಕ್ಕೂ ಮುಂದಾಗಿದ್ದಾರೆ. ಜಿಗ್ ಅಪಮೌಲ್ಯ ಮಾಡಿದ ಆರೋಪದ ಮೇಲೆ ಹತ್ತಾರು ಕರೆನ್ಸಿ ಡೀಲರ್‌ಗಳನ್ನು ಜೈಲಿಗೆ ತಳ್ಳಲಾಗಿದೆ.

ನಿಯಮ ಮೀರಿ ವಿದೇಶಿ ನೋಟುಗಳ ವಿನಿಮಯ ಮಾಡಿಕೊಂಡ 200ಕ್ಕೂ ಹೆಚ್ಚು ಬೀದಿ ನೋಟು ವ್ಯಾಪಾರಿಗಳನ್ನು ಬಂಧಿಸಲಾಗಿದೆ.

ಜಿಂಬಾಬ್ವೆಯಲ್ಲಿ ಬೀದಿ ಬದಿಯಲ್ಲೇ ನೋಟುಗಳ ವಿನಿಮಯ ಮಾಡಿಕೊಳ್ಳುವುದು ಹಿಂದಿನಿಂದಲೂ ನಡೆದುಬಂದ ಪದ್ಧತಿ. ಅಧಿಕೃತ ವಿನಿಮಯ ದರವನ್ನು ಜನರು ಪರಿಗಣಿಸದೇ, ಸ್ಥಳೀಯವಾಗಿ ದರವನ್ನು ನಿರ್ಧರಿಸುತ್ತಾರೆ. ಶೇ.80ಕ್ಕೂ ಹೆಚ್ಚು ಜನರು ವಹಿವಾಟಿಗೆ ಅಮೆರಿಕದ ಡಾಲರ್‌ಗಳನ್ನೇ ಬಳಸುತ್ತಾರೆ.

ಅಧಿಕೃತ ವಿನಿಮಯ ದರ ಪಾಲಿಸದ ಉದ್ಯಮಿಗಳಿಗೆ 2 ಲಕ್ಷ ಜಿಗ್‌ಗಳ ದಂಡ ವಿಧಿಸುವುದಾಗಿ ಸರ್ಕಾರ ಘೋಷಿಸಿತ್ತು. ಹೊಸ ನೋಟುಗಳನ್ನು ಸ್ವೀಕರಿಸಲು ಒಪ್ಪದ ಕೆಲ ಉದ್ಯಮಿಗಳ ಬ್ಯಾಂಕ್ ಖಾತೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

2009ರಲ್ಲಿ ಜಿಂಬಾಬ್ವೆಯ ಹಣ ತೀವ್ರ ಅಪಮೌಲ್ಯಗೊಂಡಿತ್ತು. ತೀವ್ರ ಹಣದುಬ್ಬರವಾಗಿ ದೇಶ ಸಂಕಷ್ಟಕ್ಕೆ ಸಿಲುಕಿತ್ತು. ಆನಂತರದಲ್ಲಿ ಜಿಂಬಾಬ್ವೆ ಹಣವನ್ನು ಸರಿದಾರಿಗೆ ತರಲು ನಡೆಸಿದ ಹಲವು ಪ್ರಯತ್ನಗಳು ವಿಫಲವಾಗಿವೆ. ಒಂದು ತುಂಡು ಬ್ರೆಡ್‌ಗಾಗಿ 500 ದಶಲಕ್ಷ ಜಿಂಬಾಬ್ವೆ ಡಾಲರ್ ನೀಡುವ ಪರಿಸ್ಥಿತಿ ಎದುರಾಗಿತ್ತು.

ಪ್ರಸಕ್ತ ಜಿಂಬಾಬ್ವೆಯಲ್ಲಿ ಶೇ.80ರಷ್ಟು ವಹಿವಾಟು ಅಮೆರಿಕದ ಡಾಲರ್‌ನಲ್ಲಿ ನಡೆಯುತ್ತಿದೆ. 2026ರ ವೇಳೆಗೆ ಇದನ್ನು ಶೇ.50ಕ್ಕೆ ಇಳಿಸಲಾಗುವುದು ಎಂದು ಜಿಂಬಾಬ್ವೆ ಕೇಂದ್ರ ಬ್ಯಾಂಕ್ ಗವರ್ನರ್ ಜಾನ್ ಮುಶಯವನ್ನು ಹೇಳಿದ್ದರು. ಆದರೆ, ಜಿಂಬಾಬ್ವೆಯಾದ್ಯಂತ ಅಮೆರಿಕದ ಡಾಲರ್ ಪ್ರಬಲವಾಗಿ ಮುಂದುವರೆದಿದೆ. ಸರ್ಕಾರಿ ನೌಕರರೇ ಕಾಳಸಂತೆಯಲ್ಲಿ ಜಿಂಬಾಬ್ವೆ ಹಣವನ್ನು ಡಾಲರ್‌ಗೆ ಪರಿವರ್ತಿಸಿಕೊಳ್ಳುತ್ತಿದ್ದಾರೆ.

ಜಿಗ್ ಕಾರಣದಿಂದ ಪರಿಸ್ಥಿತಿ ಹೆಚ್ಚೇನೂ ಬದಲಾಗುವುದಿಲ್ಲ. ಪೊಲೀಸರಿಂದ ನುಣುಚಿಕೊಳ್ಳುವ ವಿಧಾನವನ್ನು ಜನರು ಕಲಿಯಲಿದ್ದಾರೆ ಎಂದು ಜಿಂಬಾಬ್ವೆ ನ್ಯಾಷನಲ್ ಚೇಂಬರ್ ಆಫ್ ಕಾಮರ್ಸ್‌ನ ಮುಖ್ಯಾಧಿಕಾರಿ ಸೆಕ್ಕೈ ಕುವರಿಕಾ ಹೇಳಿದ್ದಾರೆ.

ಈ ಹಿಂದೆ ಬೀದಿ ಬದಿಯಲ್ಲಿ ಮುಕ್ತವಾಗಿ ನೋಟು ವಿನಿಮಯ ಮಾಡಿಕೊಳ್ಳುತ್ತಿದ್ದ ಡೀಲರ್‌ಗಳು, ಈಗ ಕದ್ದು ಮುಚ್ಚಿ ವಹಿವಾಟು ನಡೆಸುತ್ತಿದ್ದಾರೆ. ಹಲವರು ಫೇಸ್‌ಬುಕ್, ವಾಟ್ಸ್‌ಆಪ್ ರೀತಿಯ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯವಹಾರ ನಡೆಸುತ್ತಿದ್ದಾರೆ.

ಜನರನ್ನು ಬಂಧಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಸ್ಥಳೀಯ ಹಣದಲ್ಲಿ ಸ್ಥಿರತೆ ತಂದಾಗ ಮಾತ್ರ ಪರಿಸ್ಥಿತಿ ಬದಲಾಗಲು ಸಾಧ್ಯ ಎಂದು ಆರ್ಥಿಕ ಪರಿಣಿತ ಪ್ರಾಸ್ಪರ್ ಚಿತಂಬರ ಹೇಳಿದ್ದಾರೆ.

# ಪಕ್ಷಭೇದ ಮರೆತು ನನ್ನನ್ನು ಗೆಲ್ಲಿಸಿ



## ಹರಪನಹಳ್ಳಿ ಪ್ರಚಾರ ಸಭೆಯಲ್ಲಿ ಈಶಾನ್ಯ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಪ್ರತಾಪ್ ರೆಡ್ಡಿ ಮನವಿ

ಹರಪನಹಳ್ಳಿ, ಮೇ 26- ಪಕ್ಷ ಭೇದ ಮರೆತು ನನ್ನನ್ನು ಗೆಲ್ಲಿಸಿದರೆ, ವಿಧಾನ ಪರಿಷತ್‌ನಲ್ಲಿ ನಿಮ್ಮ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದು ವಿಧಾನ ಪರಿಷತ್ ಈಶಾನ್ಯ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ನಾರಾ ಪ್ರತಾಪ್ ರೆಡ್ಡಿ ಹೇಳಿದರು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿ, ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯು ಪ್ರತಿ ಬಾರಿ ಕಲಬುರಗಿ, ಬೀದರ್ ಮತ್ತು ರಾಯಚೂರು ಭಾಗಕ್ಕೆ ಅವಕಾಶ ನೀಡುತ್ತಾ ಬಂದಿವೆ. ಇದರಿಂದ ಅಖಂಡ ಬಳ್ಳಾರಿ ಸೇರಿದಂತೆ ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು. ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಸೋತಿದ್ದೇನೆ. ಈ ಬಾರಿ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೆ ಆದರೆ ಪಕ್ಷ ನನಗೆ ಅವಕಾಶ ನೀಡದ ಕಾರಣ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದೇನೆ ಎಂದು ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ ಮಾತನಾಡಿ, ಪ್ರತಾಪ್ ರೆಡ್ಡಿ ಅವರು ವಿಧಾನ ಪರಿಷತ್‌ಗೆ ಆಯ್ಕೆಯಾದರೆ ಈ ಭಾಗದ ಅಭಿವೃದ್ಧಿ ಜತೆಗೆ ಶಿಕ್ಷಣ ಹಾಗೂ ನಿರುದ್ಯೋಗ ಸಮಸ್ಯೆ ಪರಿಹರಿಸುವ ಪ್ರಯತ್ನ ಮಾಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖಂಡ ಪಾಟೀಲ್ ಬೆಟ್ಟನಗೌಡ ಮಾತ ನಾಡಿ, ಪ್ರತಾಪ್ ರೆಡ್ಡಿ ಅವರನ್ನು ಗೆಲ್ಲಿಸಿದರೆ ಪದ ವೀಧರರ ಸಮಸ್ಯೆಗಳು ಸರಿಯಾಗಲಿವೆ ಎಂದರು. ಕಸಾಪ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಾತನಾಡಿ, ಕಳೆದ ಬಾರಿ ಅಲ್ಪ ಮತಗಳಿಂದ ಸೋತಿರುವ ನಾರಾ ಪ್ರತಾಪ್ ರೆಡ್ಡಿಯವರಿಗೆ ಈ ಬಾರಿ ಹೆಚ್ಚಿನ ಮತಗಳಿಂದ ಗೆಲ್ಲಿಸೋಣ ಎಂದರು. ಈ ವೇಳೆ ನಿಚ್ಚವನಹಳ್ಳಿ ಪರಶುರಾಮಪ್ಪ, ಪರಮೇಶ್ವರಪ್ಪ, ಕಣವಿಹಳ್ಳಿ ಮಂಜುನಾಥ್, ರಾಜು, ನಂದೀಶ್ ರಾಯಪ್ಪ ಸೇರಿದಂತೆ ಇತರರು ಇದ್ದರು.

## ಆರ್ಥಿಕತೆ ಬೆಳೆಯುತ್ತಿದ್ದರೆ ಏಕಿಲ್ಲ ಸಮೃದ್ಧಿ? : ಪ್ರಿಯಾಂಕ ಪ್ರಶ್ನೆ

**(1ನೇ ಪುಟದಿಂದ)** ನೀಡಲು ಒಂದೇ ಯೋಜನೆ ಇಲ್ಲ. ಪ್ರಗತಿ ಕೇವಲ ಟಿ.ವಿ.ಗಳಲ್ಲಿ ಕಾಣುತ್ತಿದೆ, ಜನರ ಜೀವನದಲ್ಲಿ ಕಾಣುತ್ತಿಲ್ಲ ಎಂದವರು ಟೀಕಿಸಿದರು. ಅವರು ನಿಮ್ಮ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿಲ್ಲ. ಹಣದುಬ್ಬರ ಕಡಿಮೆ ಮಾಡಲು ಹಾಗೂ ನಿರುದ್ಯೋಗ ಇಳಿಸಲು ಏನು ಮಾಡಲಾಗುತ್ತಿದೆ ಎಂಬುದನ್ನು ತಿಳಿಸುತ್ತಿಲ್ಲ ಎಂದು ಪ್ರಿಯಾಂಕ ಹೇಳಿದರು.

## ಪ್ರತಿಭಾ ಪುರಸ್ಕಾರಕ್ಕೆ ಕೋಟಿ ರೂ.

**(1ನೇ ಪುಟದಿಂದ)** ಜನರಿಗೆ ಗೊತ್ತಿರಲಿಲ್ಲ. ಬಸವಣ್ಣ ಎತ್ತು ಎಂದು ನಂಬಿದ್ದರು. ಆದರೆ ವರ್ಷಗಳು ಕಳೆದಂತೆ ಬಸವಣ್ಣ ಎತ್ತಲ್ಲ, ಕೆಳಗೆ ಬಿದ್ದ ನಮ್ಮನ್ನೆಲ್ಲಾ ಎತ್ತಿದವರು ಎಂಬುದು ತಿಳಿಯಿತು ಎಂದರು.

ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಣಬೇರು ರಾಜಣ್ಣ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಶಾಮನೂರು ಶಿವಶಂಕರಪ್ಪನವರು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದಾಗಿನಿಂದ ಮಹಾಸಭೆ ವ್ಯಾಪಕವಾಗಿ ಬೆಳೆದಿದೆ. ಎಸ್ಸೆಸ್ ಅವರು ಸಮಾಜಕ್ಕೆ ಶಕ್ತಿಯಾಗಿದ್ದಾರೆ. ಮಹಾಸಭಾದಿಂದ ಪ್ರತಿವರ್ಷವೂ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಯುಪಿಎಸ್‌ಸಿಯಲ್ಲಿ 101ನೇ ರ‍್ಯಾಂಕ್ ಪಡೆದ ಕು. ಸೌಭಾಗ್ಯ ಎಸ್.ಬೀಳಗಿಮಠ, ಎಸ್ಸೆಸ್ಸೆಲ್ಸಿಯಲ್ಲಿ ಜಿಲ್ಲೆಗೆ ಮೊದಲ ರ‍್ಯಾಂಕ್ ಪಡೆದ ಕು.ಹೆಚ್.ಜಿ. ಗಾನವಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

2021-22, 2022-23ನೇ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ 24ನೇ ಮಹಾ ಅಧಿವೇಶನದ ಯಶಸ್ಸಿಗೆ ಶ್ರಮಿಸಿದ ಕಾರ್ಯಕರ್ತರಿಗೆ ಗೌರವ ಸಮರ್ಪಿಸಲಾಯಿತು.

ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನಿ ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರುಗಳಾದ ಅಥಣಿ ವೀರಣ್ಣ, ಎಸ್.ಎಸ್. ಗಣೇಶ್, ಬಿಐಇಟಿ ನಿರ್ದೇಶಕ ವೈ.ವೃಷಭೇಂದ್ರಪ್ಪ ಉಪಸ್ಥಿತರಿದ್ದರು.

ಕಲರವ ಸಾಂಸ್ಕೃತಿಕ ವೇದಿಕೆಯ ಸಿದ್ಧರಾಮ ಕೇಸಾಪುರ ಹಾಗೂ ತಂಡ ಹಾಗೂ ಕದಳಿ ವೇದಿಕೆಯವರು ವಚನ ಗೀತೆ ಹಾಡಿದರು. ಜ್ಞಾನಶ್ರೀ ನಿರೂಪಿಸಿದರು.

## ಬಸವರಾಜ, ವಕೀಲರ ಸಂಘದ ಅಧ್ಯಕ್ಷ



ಜಗಳೂರು, ಮೇ 26 - ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರಾಗಿ ಯುವ ನ್ಯಾಯವಾದಿ ಟಿ. ಬಸವರಾಜ್ ಮರೇನಹಳ್ಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಟಿ. ಬಸವರಾಜ್ ಮರೇನಹಳ್ಳಿ ಮತ್ತು ಬಿ. ಪಂಪಣ್ಣ ಹಾಗೂ ಎಸ್. ಹಾಲಪ್ಪ ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ಪಡೆಯಲು ಕೊನೆಯ ದಿನವಾಗಿದ್ದ ಶನಿವಾರ ಬಿ. ಪಂಪಣ್ಣ ಹಾಗೂ ಹಾಲಪ್ಪ ಅವರು ತಮ್ಮ ನಾಮಪತ್ರಗಳನ್ನು ಹಿಂದಕ್ಕೆ ಪಡೆದಿದ್ದರಿಂದ ಟಿ. ಬಸವರಾಜ್ ಮರೇನಹಳ್ಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಜೆ.ಎಸ್. ಪ್ರಕಾಶ್ ಹಾಗೂ ಕಾರ್ಯದರ್ಶಿಯಾಗಿ ಎ.ಕೆ. ಪರಶುರಾಮ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿ ಹಾಗೂ ವಕೀಲ ಸಣ್ಣೋಬಯ್ಯ ಘೋಷಿಸಿದರು. ಅಧ್ಯಕ್ಷರಾಗಿದ್ದ ಈ ಓಂಕಾರಪ್ಪ, ಕಾರ್ಯದರ್ಶಿ ಕೆ.ವಿ. ರುದ್ರೇಶ್ ಅವರ ಅಧಿಕಾರವಧಿ ಮುಗಿದ ಹಿನ್ನೆಲೆಯಲ್ಲಿ ಚುನಾವಣೆ ನಡೆಯಿತು.

# ಮಂಜಪ್ಪಗೆ ವಿಧಾನ ಪರಿಷತ್ ಟಿಕೆಟ್ ನೀಡಿ

### ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಕುರುಬ ಸಮಾಜದ ಕಾರ್ಯಾಧ್ಯಕ್ಷ ಧರ್ಮಪ್ಪ ಒತ್ತಾಯ



ಹೊನ್ನಾಳಿ, ಮೇ 26- ಕುರುಬ ಸಮಾಜದ ಮುಖಂಡ ಹಾಗೂ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪ ಅವರಿಗೆ ವಿಧಾನ ಪರಿಷತ್ ಟಿಕೆಟ್ ನೀಡುವಂತೆ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಕುರುಬ ಸಮಾಜದ ಕಾರ್ಯಾಧ್ಯಕ್ಷ ಧರ್ಮಪ್ಪ ಒತ್ತಾಯಿಸಿದರು.

ಪಟ್ಟಣದಲ್ಲಿ ಅವಳಿ ತಾಲ್ಲೂಕುಗಳ ಕುರುಬ ಸಮಾಜದಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷಕ್ಕೆ ಎಚ್.ಬಿ. ಮಂಜಪ್ಪ ಅವರ ಕೊಡುಗೆ ಅಪಾರವಿದೆ. ಪಕ್ಷದಿಂದ ಅನ್ಯಾಯವಾದರೂ ಪಕ್ಷ ವಿರೋಧಿ ಚಟುವಟಿಕೆ ಮಾಡದೇ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ ಆದ್ದರಿಂದ ಪಕ್ಷದ ವರಿಷ್ಠರು ಮಂಜಪ್ಪ ಅವರಿಗೆ ಅವಕಾಶ ನೀಡಬೇಕು ಎಂದರು.

2013, 2018 ಮತ್ತು 2023ರ ಚುನಾವಣೆಯಲ್ಲೂ ಪ್ರಬಲ ಆಕಾಂಕ್ಷಿಯಾಗಿದ್ದ ಮಂಜಪ್ಪ ಅವರಿಗೆ ಪಕ್ಷದಿಂದ ಟಿಕೆಟ್ ಕೈ ತಪ್ಪಿದರೂ ಪಕ್ಷವನ್ನು ದ್ವೇಷಿಸದೇ, ಶಾಸಕ ಡಿ.ಜಿ. ಶಾಂತನಗೌಡ ಅವರ ಗೆಲುವಿಗೆ ಸಹಕರಿಸಿದ್ದಾರೆ ಎಂದು ಹೇಳಿದರು.

ಅವಳಿ ತಾಲ್ಲೂಕಿನ ಕುರುಬ ಸಮಾಜದ ಅಧ್ಯಕ್ಷ ನೆಲಹೊನ್ನೆ ಮೋಹನ್ ಮಾತನಾಡಿ, 2023ರ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪಿದ್ದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮೊದಲು ಅಭ್ಯರ್ಥಿಯನ್ನು ಗೆಲ್ಲಿಸಿ, ನಂತರ ಮಂಜಪ್ಪರನ್ನು ಎಂಎಲ್‌ಸಿ ಮಾಡೋಣ ಎಂದು ಭರವಸೆ ನೀಡಿದ್ದರು. ಆದ್ದರಿಂದ ಸಚಿವರು ತಮ್ಮ ಮಾತಿನಂತೆ ನಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ಶೇ.80ರಷ್ಟು ಕುರುಬ ಸಮಾಜದ ಬೆಂಬಲ ಹೊಂದಿದ ಮಂಜಪ್ಪ ಅವರಿಗೆ ಎಂಎಲ್ಸಿ ಚುನಾವಣೆಗೆ ಅವಕಾಶ ನೀಡಿದರೆ ಸಮಾಜಕ್ಕಾದ ಅನ್ಯಾಯ ಸರಿಪಡಿಸಿದಂತಾಗುತ್ತದೆ. ಆದ್ದರಿಂದ ಪಕ್ಷದ ಶಾಸಕರು ಹೈಕಮಾಂಡ್‌ಗೆ ಒತ್ತಾಯಿಸಬೇಕು ಎಂದು ವಿನಂತಿಸಿದರು.

ನರಸಪ್ಪ, ಬಸವರಾಜ್ ಬಸವನಹಳ್ಳಿ, ಎಚ್.ಡಿ. ವಿಜೇಂದ್ರಪ್ಪ, ಕುಂಬಳೂರು ವಾಗೀಶ್, ಬೆನಕಪ್ಪ ಹರಳಹಳ್ಳಿ, ಕೆ. ಪುಟ್ಟಪ್ಪ, ಖಜಾಂಚಿ ಎಚ್.ಎ. ನರಸಿಂಹಪ್ಪ, ಸಮಾಜದ ಮುಖಂಡರಾದ ಸರಳಿನ ಮನೆ ರಾಜಪ್ಪ, ಎಚ್. ಬಿ. ಅಣ್ಣಪ್ಪ, ಮಾರಿಕೊಪ್ಪದ ಹಳದಪ್ಪ, ಚಿನ್ನಪ್ಪ, ತಿಮ್ಮೇನಹಳ್ಳಿ ಹನುಮಂತಪ್ಪ, ನೆಲಹೊನ್ನೆ ಹಾಲೇಶಪ್ಪ, ಆಂಜನೇಯ, ಸತ್ತಿಗೆ ರಾಜಪ್ಪ, ಮಾರಜೋಗಿ ಬಸವರಾಜಪ್ಪ ಮತ್ತು ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಇಂದಿನಿಂದ ಜೂ.2 ರವರೆಗೆ ಭಿತ್ತಿ ಚಿತ್ರ ಕಲಾ ಶಿಬಿರ

ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ಭಿತ್ತಿಚಿತ್ರ ಕಲಾ ಶಿಬಿರವನ್ನು ಇಂದಿನಿಂದ ಬರುವ ಜೂನ್ 2 ರವರೆಗೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 10.30ಕ್ಕೆ ಶಿಬಿರದ ಉದ್ಘಾಟನಾ ಸಮಾರಂಭ ಏರ್ಪಾಡಾಗಿದ್ದು, ದಾವಣಗೆರೆ ವಿವಿ ಕುಲಸಚಿವ ಡಾ. ಯು.ಎಸ್. ಮಹಾಬಲೇಶ್ವರ ಶಿಬಿರವನ್ನು ಉದ್ಘಾಟಿಸುವರು.

ಕಾಲೇಜಿನ ಪ್ರಾಂಶುಪಾಲ ಡಾ. ಜಯರಾಜ ಎಂ. ಚಿಕ್ಕಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ದಾವಣಗೆರೆ ವಿವಿ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ಡಾ. ಅಶೋಕ ಕುಮಾರ ವಿ. ಪಾಳೇದ ಮತ್ತು ಲಲಿತಕಲಾ ಅಕಾಡೆಮಿ ಮಾಜಿ ಸದಸ್ಯ ಎ. ಮಹಲಿಂಗಪ್ಪ ಮುಖ್ಯ ಅತಿಥಿಗಳಾಗಿದ್ದಾರೆ.

## ಧರ್ಮ ಆಧರಿತ ಅಭಿಯಾನವೇ?

**(1ನೇ ಪುಟದಿಂದ)** ಈ ಹಿಂದೆ ತೆಲಂಗಾಣ, ಪಶ್ಚಿಮ ಬಂಗಾಳ ಹಾಗೂ ಹಿಮಾಚಲ ಪ್ರದೇಶಗಳಲ್ಲೂ ಇದೇ ರೀತಿಯ ಚುನಾವಣಾ ಪ್ರಕ್ರಿಯೆ ಅನುಸರಿಸಲಾಗಿತ್ತು. ಅಲ್ಲಿ ಬಿಜೆಪಿ ಪರಾಭವಗೊಂಡಿತ್ತು. ಈ ಚುನಾವಣೆಗಳು ನ್ಯಾಯೋಚಿತ ಎನ್ನುವುದಾದರೆ, ಇಲ್ಲಿಯವರೆಗೆ ನಡೆದಿರುವ ಚುನಾವಣೆ ನ್ಯಾಯೋಚಿತ ಎಂದು ಅಮಿತ್ ಷಾ ಹೇಳಿದ್ದಾರೆ.

ಪ್ರತಿಪಕ್ಷಗಳಿಗೆ ಸೋಲಿನ ಲಕ್ಷಣಗಳು ಕಂಡು ಬಂದಾಗಲೆಲ್ಲಾ ಅವರು ಮೊದಲೇ ಗೋಳಾಡುತ್ತಾರೆ ಹಾಗೂ ಚುನಾವಣೆ ನಂತರ ವಿದೇಶಕ್ಕೆ ತೆರಳುತ್ತಾರೆ ಎಂದು ಅಮಿತ್ ಷಾ ಲೇವಡಿ ಮಾಡಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವೈಫಲ್ಯ ಮುಚ್ಚಿಟ್ಟುಕೊಳ್ಳಲು ಕಾಂಗ್ರೆಸ್ ಪಕ್ಷವು ಚುನಾವಣಾ ಪ್ರಕ್ರಿಯೆಯನ್ನು ಪ್ರಶ್ನಿಸುತ್ತಿದೆ ಎಂದವರು ಆರೋಪಿಸಿದರು.

ಚುನಾವಣೆಗೆ ಮುಂಚೆ ಆಯೋಗ ಸರ್ವಪಕ್ಷಗಳ ಸಭೆ ಕರೆದ ಸಂದರ್ಭದಲ್ಲಿ ಪ್ರತಿಪಕ್ಷಗಳು ಈ ವಿಷಯಗಳ ಬಗ್ಗೆ ಪ್ರಸ್ತಾಪಿಸಲಿಲ್ಲ. ಮತ ಯಂತ್ರಗಳನ್ನು ರಿಗ್ಗಿಂಗ್ ಮಾಡಲು ಸಾಧ್ಯವಿಲ್ಲ. ಅವರು ಚುನಾವಣೆಯಲ್ಲಿ ರಿಗ್ಗಿಂಗ್ ಮಾಡಲು ಬಯಸುತ್ತಿದ್ದಾರೆ ಎಂದು ಅಮಿತ್ ಷಾ ದೂರಿದರು.

## ಠಾಣೆ ಧ್ವಂಸ : 25 ಜನರ ಬಂಧನ

**(1ನೇ ಪುಟದಿಂದ)** ಠಾಣೆ ಧ್ವಂಸವಾಗಿತ್ತು. ಇದೀಗ ಚನ್ನಗಿರಿಯಲ್ಲಿ ಪೊಲೀಸ್ ಬಂದೋಬಸ್ತ್ ಮುಂದುವರೆದಿದ್ದು, ಪಟ್ಟಣ ಸಹಜ ಸ್ಥಿತಿಯತ್ತ ಮರುಳುತ್ತಿದೆ. ಶನಿವಾರ ನ್ಯಾಯಾಧೀಶರ ಎದುರು ಆದಿಲ್‌ನ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿತ್ತು.

ಪೊಲೀಸ್ ಠಾಣೆ ಎದುರು ನಡೆದ ದಾಂಧಲೆ ಪ್ರಕರಣದ ಆರೋಪಿಗಳ ಪತ್ತೆಗೆ 5 ತಂಡಗಳನ್ನು ರಚಿಸಲಾಗಿತ್ತು. ಈ ತಂಡಗಳು ಸಿ.ಸಿ. ಕ್ಯಾಮೆರಾ, ಮೊಬೈಲ್ ವಿಡಿಯೋ ದೃಶ್ಯಾವಳಿಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಿವೆ. ಬಂತ ಚನ್ನಗಿರಿ, ಹೊನ್ನೆ ಬಾಗಿ, ನಲ್ಲೂರು ಗ್ರಾಮಗಳ 25 ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಘಟನೆ ಹಿನ್ನೆಲೆ ಚನ್ನಗಿರಿ ಪಟ್ಟಣದಲ್ಲಿ ಪೊಲೀಸ್ ಬಂದೋಬಸ್ತ್ ಮುಂದುವರೆದಿದ್ದು, ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಎಸ್ಪಿ ಹೇಳಿದ್ದಾರೆ.

ಚನ್ನಗಿರಿ ಘಟನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ಸಾಮಾಜಿಕ ಜಾಲತಾಣಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರುವಂತಹ, ಧಾರ್ಮಿಕ ಹಾಗೂ ವ್ಯಕ್ತಿ ನಿಂದನೆ ಪೋಸ್ಟಗಳು, ಪ್ರಚೋದನಕಾರಿ ಹೇಳಿಕೆ, ವಿಡಿಯೋ ಶೇರ್ ಮಾಡಬಾರದು. ಶಾಂತಿ, ಸುವ್ಯವಸ್ಥೆಗೆ ಧಕ್ಕೆ ಬರುವಂತಹ ಪೋಸ್ಟ್ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಉಮಾ ಪ್ರಶಾಂತ್ ಎಚ್ಚರಿಸಿದ್ದಾರೆ.

## ಕೊಲೀಜಿಯಂ ವ್ಯವಸ್ಥೆ ಅಸಂವಿಧಾನಿಕ : ಕುಶ್ವಾಹ

ಕರಟಕ್, ಮೇ 26 - ಕೊಲೀಜಿಯಂ ವ್ಯವಸ್ಥೆ ಅಸಂವಿಧಾನಿಕವಾಗಿದ್ದು, ಇದನ್ನು ರದ್ದುಗೊಳಿಸಲು ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಮತ್ತೊಮ್ಮೆ ಪ್ರಯತ್ನ ನಡೆಸಬೇಕು ಎಂದು ಮಾಜಿ ಕೇಂದ್ರ ಸಚಿವ ಉಪೇಂದ್ರ ಕುಶ್ವಾಹ ಹೇಳಿದ್ದಾರೆ. ಬಿಹಾರದ ಕರಟಕ್ ಲೋಕಸಭಾ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಕೊಲೀಜಿಯಂ ವ್ಯವಸ್ಥೆಯಲ್ಲಿ ಹಲವು ದೋಷಗಳಿವೆ. ಇದರಿಂದಾಗಿ ದಲಿತರು, ಒ.ಬಿ.ಸಿ. ಹಾಗೂ ಮೇಲ್ಜಾತಿಯ ಬಡವರಿಗೆ ಉನ್ನತ ನ್ಯಾಯಾಂಗದ ಬಾಗಿಲು ಮುಚ್ಚಿದೆ ಎಂದು ಹೇಳಿದರು.

ಈ ಕ್ಷೇತ್ರದಲ್ಲಿ ಕುಶ್ವಾಹ ಅವರು ಅಭ್ಯರ್ಥಿಯಾಗಿದ್ದಾರೆ. ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಸಹ ಉಪಸ್ಥಿತರಿದ್ದರು.

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ಪೀಠಗಳ ರಚನೆಯನ್ನು ಗಮನಿಸಿದಾಗ, ಕೆಲವು ನೂರು ಕುಟುಂಬಗಳ ಸದಸ್ಯರು ಅಲ್ಲಿ ಪ್ರಾಬಲ್ಯ ಹೊಂದಿರುವುದು ಕಂಡು ಬರುತ್ತದೆ ಎಂದು ಕುಶ್ವಾಹ ಹೇಳಿದ್ದಾರೆ.


**ಕಮರ್ಷಿಯಲ್ ಖಾಲಿ ಜಾಗ ಬಾಡಿಗೆಗೆ ದೊರೆಯುತ್ತವೆ. ವಿಚಾರಿಸಿ**
ಶಾಮನೂರು ಹತ್ತಿರ Top In Town ಪಕ್ಕದಲ್ಲಿ 160x180 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
40x60 ದಕ್ಷಿಣ
100 ಅಡಿ ರಸ್ತೆಯ ಹಿಂಭಾಗದ 40 ಅಡಿ ರಸ್ತೆಗೆ (ಲೋಕೇಶನ್ ತುಂಬಾ ಚೆನ್ನಾಗಿದೆ)
ಮಾಲೀಕರು : 96633-35235

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ACE TRACTOR SHOWROOM ನಲ್ಲಿ ಕೆಲಸ ಮಾಡಲು ಅಕೌಂಟೆಂಟ್ (ಮಹಿಳೆಯರು) ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ನೀಡಲಾಗುವುದು. ಟ್ಯಾಲಿ ಆಗಿರುವ ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**SSY ತರಬೇತಿ**
ದಿನಾಂಕ 27.05.2024ರಿಂದ ಸಿದ್ಧ ಸಮಾಧಿ ಯೋಗ (SSY) ತರಬೇತಿ ಆರಂಭ.
ಸ್ಥಳ: ರಾಂ ಅಂಡ್ ಕೋ ವೃತ್ತ, ದಾವಣಗೆರೆ.
ಮೊ: 9964675441, 9448667523, 9731993770

**Property Hub**
• EC
• E-swathu
• Building Licence
• Khatha Change
96118 66449

**ಸ್ಪೋಕನ್ ಇಂಗ್ಲಿಷ್**
ಟ್ಯೂಷನ್, ಹ್ಯಾಂಡ್‌ರೈಟಿಂಗ್
100 % ಅತ್ಯುತ್ತಮ ಫಲಿತಾಂಶ
ಮಿರಜ್‌ಕರ್ ಟ್ಯುಟೋರಿಯಲ್
90369 96243

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 North, 50x80 ಅಕ್ಕ-ಪಕ್ಕ, 50x80 East, 40x60 East, 40x60 West, 40x60 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ ಅಕ್ಕ-ಪಕ್ಕ, 30x50 ಪಶ್ಚಿಮ ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆಯಲ್ಲಿ 30x57 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಸೈಟ್ ಬೇಕಾಗಿದೆ**
40x60, 50x80, 30x60 ಅಳತೆ ಇರುವ ಸೈಟುಗಳು ಗ್ಲಾಸ್‌ಹೌಸ್ ಹತ್ತಿರ ಬೇಕಾಗಿದೆ. ಸಂಪರ್ಕಿಸಿ
ಮೊ. 63621 49155

**ಡೆಸ್ಕ್‌ಗಳು ಮಾರಾಟಕ್ಕಿವೆ**
ಸ್ಕೂಲ್/ಕಾಲೇಜಿಗೆ ಅನುಕೂಲವಾಗುವ ಉತ್ತಮ ಸ್ಥಿತಿಯಲ್ಲಿರುವ 30 ಡೆಸ್ಕ್‌ಗಳು ಮಾರಾಟಕ್ಕಿವೆ. ಆಸಕ್ತರು ಸಂಪರ್ಕಿಸಿ
ಮೊ. 97402 58276

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ. ಜೆ. ಬಡಾವಣೆ ದಾವಣಗೆರೆ.

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಶಂಕರಲೀಲಾ ಫ್ಯುಯಲ್ ಸ್ಟೇಷನ್
ಆವರಗೆರೆ, ಜೈನ್ ಟೆಂಪಲ್ ಪಕ್ಕ, ದಾವಣಗೆರೆ.
90190 94446

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಚ್ ಗೇಟ್ ಹತ್ತಿರ, 4ನೇ ಕ್ರಾಸ್, ಅಮರಾವತಿ ರಸ್ತೆ, 4ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ (1850/- ರೂ. ಚದುರಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ :
98452 36274

**ಮಳಿಗೆ ಮಾರಾಟಕ್ಕೆ ಇದೆ**
ಡೋ.ನಂ. 80/6, ರೇಣುಕಾ ಮಂದಿರದ ಎದುರು, ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, 2ನೇ ಮುಖ್ಯರಸ್ತೆಯಲ್ಲಿ ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಒಟ್ಟು 650 ಚದುರಡಿ ಇರುವ ಮಳಿಗೆ ಮಾರಾಟಕ್ಕೆ ಇದೆ.
93422 96777

**ಅಡಿಕೆ ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಯೋಗ್ಯ ತಳಿಯ ಅಡಿಕೆ ಸಸಿಗಳು ದೊರೆಯುತ್ತವೆ, ಬೇಕಾದಲ್ಲಿ ಸಂಪರ್ಕಿಸಿ :
98441 22269
86182 17245

**Build to Suit**
2200 Sq.feet Approx, 2nd Floor, 2nd Main, 3rd Cross, Near Mama's Joint Road, MCC 'B' Block, Davangere. No Lift, Bore and Corporation Water.
94484 23715, 70190 42531

**WANTED**
NO SALES Target NGO
Field service manager
Male & Female
SSLC & PUC
PASS / FAIL, Full time
63630 93755

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಬೆಳಿಗ್ಗೆ 11 ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
9164054547

**ಓದುಗರ ಗಮನಕ್ಕೆ**
-ಜಾಹೀರಾತು ವ್ಯವಸ್ಥಾಪಕರು

**WANTED SALESMEN FOR REPUTED COMPANY**
Experience in TV, Moblile, WATCHES, ACCESSORIES SALES
Preferred Davangere Candidates
Attractive Salary + Incentives
JAIN ENTERPRISES
6/2, Chowkipet cross, Chigateri Galli, Opp. : Axis Bank ATM, Davangere-577 001.
98445 55551

**ಮಳಿಗೆ ಖಾಲಿ ಇದೆ**
ಟೈಲರಿಂಗ್, ಇಸ್ತ್ರಿ ಅಂಗಡಿ, ಎಲೆಕ್ಟ್ರಿಕಲ್ ರಿಪೇರಿ ಮಾಡುವವರಿಗೆ ಯೋಗ್ಯ ಸ್ಥಳ. ವಿಚಾರಿಸಿ : 6ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
90365 70913

**ಸೈಟು ಮಾರಾಟಕ್ಕಿದೆ**
40'x60' ಅಳತೆಯ ಸೈಟು ನಂ. 2291-HIG-I, ಕರ್ನಾಟಕ ಗೃಹ ಮಂಡಳಿ, ತುಂಗಭದ್ರಾ ಬಡಾವಣೆ, ದಾವಣಗೆರೆಯಲ್ಲಿ ಸೈಟು ಮಾರಾಟಕ್ಕಿದೆ
ಮೊ. 94814 17793
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್
Tally Work : Any degree
ಹೋಲ್‌ಸೇಲ್ ಬಟ್ಟೆ ಅಂಗಡಿ 27, ವಿಜಯಲಕ್ಷ್ಮಿ ರೋಡ್, ಗಡಿಯಾರ ಕಂಬದ ಹತ್ತಿರ.
94835 00523

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸೈಟು ಮಾರಾಟಕ್ಕೆ**
ಗ್ಲಾಸ್ ಹೌಸ್ ಪಕ್ಕ (ಎಸ್.ಎಸ್.ಎನ್ ಕ್ಲೇವ್ಸ್) 30x38 ದಕ್ಷಿಣ ಮುಖ ಇರುವ ಸೈಟು ಮಾರಾಟಕ್ಕಿದೆ.
99862 34416

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ Above 40 years ಅನುಭವವುಳ್ಳವರು ಡ್ರೈವರ್, ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
63620 23451
97434 37003

**ಬೇಕಾಗಿದ್ದಾರೆ**
ಪ್ರಸಿದ್ಧ ವಾಣಿಜ್ಯ ವಾಹನಗಳ ಅಧಿಕೃತ ಸೇವಾ ಕೇಂದ್ರಕ್ಕೆ ಆಕರ್ಷಕ ಸಂಬಳ ಹಾಗೂ ಪ್ರೋತ್ಸಾಹ ಧನ ನೀಡಲಾಗುತ್ತದೆ. ಸ್ಪೇರ್ಸ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್, ವರ್ಕ್‌ಶಾಪ್, ಸೂಪರ್‌ವೈಸರ್ಸ್, ಮೆಕ್ಯಾನಿಕ್ಸ್, ಹೆಲ್ಪರ್, ಬಿಲ್ಲಿಂಗ್ ಅಸಿಸ್ಟೆಂಟ್, ಆಫೀಸ್ ಬಾಯ್ ಬೇಕಾಗಿದ್ದಾರೆ.
9900596383, 9844124036

**II - PUC Tutions**
Supplementary
Science & Commerce
Samrudhi Academy
96202 62361

**WANTED**
(Male or Female)
Mobile Shop
Experienced Or Fresher
Sale Executive-2
Bhosle Telecome
98868 08412

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**3BHK HOUSE FOR RENT**
at Uttam Badavane, 1st Main, B Ward, No-30 Avaragere Road, Davanagere.
9901564535, 94498 04535

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮಾರಾಟಕ್ಕಿದೆ**
ಶ್ರೀನಿವಾಸ ನಗರ 5 ನೇ 6ನೇ ಕ್ರಾಸ್ ನಲ್ಲಿ 60 ಅಡಿ ರಸ್ತೆಗೆ ಸಮೀಪವಿರುವ 20×60 ಸೈಟ್ ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ. ಸಂಪರ್ಕಿಸಿ :
7676232720, 8496047281

# ಗಡ್ಕರಿ ಸೋಲಿಸಲು ಮೋದಿ ಯತ್ನಿಸಿದ್ದರು : ರಾವತ್

ಮುಂಬೈ, ಮೇ 26 - ನಾಗಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಕೇಂದ್ರ ಸಚಿವ ನಿತಿನ್ ಗಡ್ಕರಿಯನ್ನು ಸೋಲಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರಯತ್ನ ನಡೆಸಿದ್ದರು ಎಂದು ಶಿವಸೇನೆ (ಯುಬಿಟಿ) ನಾಯಕ ಸಂಜಯ್ ರಾವತ್ ಆರೋಪಿಸಿದ್ದಾರೆ.

ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಷಾ ಹಾಗೂ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಲೋಕಸಭಾ ಚುನಾವಣೆಯಲ್ಲಿ ಗಡ್ಕರಿ ಸೋಲಿಸುವ ಪ್ರಯತ್ನ ನಡೆಸಿದ್ದರು. ಆದರೆ, ಗಡ್ಕರಿ ಸೋಲಿಸಲಾಗದು ಎಂಬುದು ಅರ್ಥವಾದ ನಂತರ, ಒಲ್ಲದ ಮನಸ್ಸಿನಿಂದ ಅವರ ಪರವಾಗಿ ಫಡ್ನವೀಸ್ ಪ್ರಚಾರ ಮಾಡಿದ್ದಾರೆ ಎಂದು ರಾವತ್ ಹೇಳಿದ್ದಾರೆ. ಗಡ್ಕರಿ ಸೋಲಿಸಲು ಫಡ್ನವೀಸ್ ಅವರು ವಿರೋಧಿಗಳಿಗೆ ನೆರವಾಗಿದ್ದಾರೆ ಎಂದು ನಾಗಪುರದ ಆರ್.ಎಸ್.ಎಸ್.ನವರು ಬಹಿರಂಗವಾಗಿಯೇ ಹೇಳುತ್ತಿದ್ದಾರೆ ಎಂದು ರಾವತ್ ಹೇಳಿದ್ದಾರೆ.

ಈ ಆರೋಪ ತಳ್ಳಿ ಹಾಕಿರುವ ಬಿಜೆಪಿ ರಾಜ್ಯಾಧ್ಯಕ್ಷ ಚಂದ್ರಶೇಖರ್ ಬವಂಕುಲೆ, ರಾವತ್ ಭ್ರಮೆಯಲ್ಲಿ ಸಿಲುಕಿದ್ದಾರೆ. ಬಿಜೆಪಿ ಒಂದು ಕುಟುಂಬದಂತೆ ಕಾರ್ಯ ನಿರ್ವಹಿಸುತ್ತದೆ ಎಂದಿದ್ದಾರೆ.

ಮೋದಿ, ಷಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಗಡ್ಕರಿ ಹಾಗೂ ಫಡ್ನವೀಸ್ ಅವರು ಬಿಜೆಪಿ ಕುಟುಂಬದ ಸದಸ್ಯರು. ನಾವು ಸದಾ ದೇಶ ಮೊದಲು, ಪಕ್ಷ ನಂತರ ಹಾಗೂ ನಾನು ಕೊನೆಗೆ ಎಂದು ಕಾರ್ಯ ನಿರ್ವಹಿಸುತ್ತೇವೆ ಎಂದು ಹೇಳಿದ್ದಾರೆ.

ನಾಗಪುರದ ಕಾಂಗ್ರೆಸ್ ಅಭ್ಯರ್ಥಿ ವಿಕಾಸ್ ಠಾಕ್ರೆ ಅವರು ರಾವತ್ ತರಾಟೆಗೆ ತೆಗೆದುಕೊಂಡಿದ್ದು, ಗಡ್ಕರಿ ಗೆಲ್ಲುತ್ತಾರೆ ಎಂಬುದು ಅವರಿಗೆ ಹೇಗೆ ಗೊತ್ತಿದೆ? ಅವರೇನು ಜ್ಯೋತಿಷಿಯೇ? ರಾವತ್ ಎಂ.ವಿ.ಎ. ಮೈತ್ರಿಕೂಟದಲ್ಲಿದ್ದರೂ ಗಡ್ಕರಿ ಪರವಾಗಿದ್ದಾರೆ ಎಂದು ಆರೋಪಿಸಿದ್ದಾರೆ. ಗಡ್ಕರಿ ಪರವಾಗಿ ಬಹಿರಂಗವಾಗಿ ಹೇಳಿಕೆ ನೀಡುವ ಮೂಲಕ ರಾವತ್ ಅವರು ಎಂ.ವಿ.ಎ.ಗೆ ಹಾನಿ ಮಾಡುತ್ತಿದ್ದಾರೆ ಎಂದು ವಿಕಾಸ್ ಠಾಕ್ರೆ ಹೇಳಿದ್ದಾರೆ.

# ಪಡೆದ ಜ್ಞಾನವನ್ನು ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು

## ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ಚೈತ್ರ 2024ರ ಸಮಾರೋಪದಲ್ಲಿ ರಂಗನಾಥ್ ಭಾರದ್ವಾಜ್




ದಾವಣಗೆರೆ, ಮೇ 26 - ನಗರದ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಚೈತ್ರ - 2024ರ ಸಮಾರೋಪ ಸಮಾರಂಭವು ನಿನ್ನೆ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಪತ್ರಕರ್ತರೂ, ಟಿವಿ 9 ಕನ್ನಡ ಕರ್ನಾಟಕ ಪ್ರೈವೇಟ್ ಲಿಮಿಟೆಡ್ ಹಿರಿಯ ನಿರ್ಮಾಪಕರೂ ಆದ ರಂಗನಾಥ ಎಸ್. ಭಾರದ್ವಾಜ್ ಅವರು ಮಾತನಾಡಿ, ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಎಲ್ಲಾ ರಂಗಗಳಲ್ಲಿಯೂ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಉದಾಹರಣೆ ಮೂಲಕ ಹೇಳಿದರು.

ಹಿರಿಯ ನಟ ಅನಂತ್ ನಾಗ್ ಅವರನ್ನು ತಾವು ಸಂದರ್ಶನ ಮಾಡಿದ ಸಂದರ್ಭವನ್ನು ಮೆಲುಕು ಹಾಕಿದ ಭಾರದ್ವಾಜ್, ಅನಂತನಾಗ್ ಅವರ ಆದರ್ಶಗಳನ್ನು ಕೊಂಡಾಡಿದರು.

ರಾಜೇಶ್ವರಿ ಚಟರ್ಜಿ ಅವರು ಭಾರತದ ಮೊದಲ ಮಹಿಳಾ ಇಂಜಿನಿಯರ್ ಆಗಿದ್ದರು. ಮೊದಲ ಮಹಿಳಾ ಸಿವಿಲ್ ಇಂಜಿನಿಯರ್ ಆದ ಶಕುಂತಲಾ ಜೋಶಿ ಅವರನ್ನು 1993ರಲ್ಲಿ ವರ್ಷದ ಇಂಜಿನಿಯರ್ ಎಂದು ಭಾರತ ಸರ್ಕಾರದ ವತಿಯಿಂದ ಸನ್ಮಾನಿಸಲಾಯಿತು. ಇವರು ಭಾರತವು ಸೇರಿದಂತೆ ಜರ್ಮನಿ, ಲಂಡನ್, ಅಮೇರಿಕಾ ದೇಶಗಳಲ್ಲಿ ಅನೇಕ ಡ್ಯಾಮ್ ಗಳನ್ನು ನಿರ್ಮಿಸಿರುವುದನ್ನು ಅವರು ಶ್ಲಾಘಿಸಿದರು.

ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಅವರ ಸಾಧನೆಗಳನ್ನು ಸ್ಮರಿಸಿದ ಅವರು, ವಿದ್ಯಾರ್ಥಿಗಳು ವಿಶ್ವೇಶ್ವರಯ್ಯ ಅವರ ಆದರ್ಶಗಳನ್ನು ಪಾಲಿಸಬೇಕೆಂದು ಕರೆ ನೀಡಿದರು. ಈಗ ನಮ್ಮ ದೇಶದಲ್ಲಿ ಪ್ರತಿವರ್ಷ 15 ಲಕ್ಷ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಕಾಲೇಜಿನಿಂದ ಹೊರ ಬರುತ್ತಿದ್ದಾರೆ. ವಿದ್ಯಾರ್ಥಿಗಳು ತಾವು ಓದುವಾಗ ಪಡೆದ ಜ್ಞಾನವನ್ನು ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

1990ರ ದಶಕದಲ್ಲಿ ನಮ್ಮ ದೇಶದೊಂದಿಗೆ ರಷ್ಯಾ ದೇಶವು ಉತ್ತಮ ಬಾಂಧವ್ಯವನ್ನು ಹೊಂದಿತ್ತು. ರಷ್ಯಾದ ಅಂದಿನ ಅಧ್ಯಕ್ಷ ಗೋರ್ಬಚೇವ್ ಅವರನ್ನು ಭಾರತ ದೇಶವು ಕ್ರಯೋಜನಿಕ್ ಎಂಜಿನ್ ತಂತ್ರಜ್ಞಾನವನ್ನು ನೀಡಲು ಕೋರಿತು. ಆದರೆ ಆಗ ಅಮೆರಿಕಾ ದೇಶವು ಅಡ್ಡಿಪಡಿಸಿತು. ಈ ಪರಿಸ್ಥಿತಿಯಲ್ಲಿ ನಮ್ಮ ದೇಶದ ಅಂದಿನ ಇಸ್ರೋ ಅಧ್ಯಕ್ಷ ಡಾ. ಯು. ಆರ್. ರಾವ್ ಅವರು ನಾವೇ ಏಕೆ ಕ್ರಯೋಜನಿಕ್ ಎಂಜಿನ್ ತಂತ್ರಜ್ಞಾನವನ್ನು ಮಾಡಬಾರದು ಎಂದು ಕೇಳಿ, ಕೇವಲ ಮೂರು ವರ್ಷಗಳಲ್ಲಿ ಈ ತಂತ್ರಜ್ಞಾನವನ್ನು ಮಾಡಿ ಯಶಸ್ವಿಯಾದರು. ಈಗ ಭಾರತದ ಶಕ್ತಿ ಗಗನಯಾನದಲ್ಲಿ ಉಪಗ್ರಹದ ಕ್ಷೇತ್ರದಲ್ಲಿ ಬಹಳಷ್ಟು ಸಾಧನೆ ಮಾಡಿದೆ ಎಂದು ತಿಳಿಸಿದರು.

ಟಾಟಾ ಕಂಪನಿಯಲ್ಲಿ ಟಾಟಾ ಸುಮೋ ಎಂಬ ವಾಹನದ ಹೆಸರಿನ ಬಗ್ಗೆಯ ಘಟನೆಯನ್ನು ವಿವರಿಸಿದರು. ಸುಮಂತ್ ಗಾವಂಕರ್ ಎನ್ನುವವರು ಟಾಟಾ ಕಂಪನಿಯಲ್ಲಿ ಉದ್ಯೋಗಿಯಾಗಿದ್ದರು. ಇವರು ಕೊಟ್ಟ ಸಲಹೆಯನ್ನು ಉಪಯೋಗಿಸಿ ನಿರ್ಮಿಸಿದ್ದರಿಂದ ಟಾಟಾ ಸುಮೋ ಎಂದು ಆ ವಾಹನಕ್ಕೆ ಹೆಸರಿಡಲಾಯಿತು ಎಂದರು. ಈ ರೀತಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ವೃತ್ತಿ ಜೀವನದಲ್ಲಿ ಮುಂದುವರೆಯಬೇಕೆಂದು ಸಲಹೆ ನೀಡಿದರು.

ವಿದ್ಯಾರ್ಥಿ ಸಂಘದ ಅಧಿಕಾರಿ ಡಾ. ಎಸ್. ಮಂಜಪ್ಪ ಅವರು ವಿದ್ಯಾರ್ಥಿ ಸಂಘದ ಚಟುವಟಿಕೆಗಳನ್ನು ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಡಿ.ಪಿ. ನಾಗರಾಜಪ್ಪ ಅವರು ಕಾಲೇಜಿನ ಅಭಿವೃದ್ಧಿಯ ಬಗ್ಗೆ ವಿವರಿಸಿದರು.

ವಿದ್ಯಾರ್ಥಿಗಳಾದ ವಿನುತಾ ಪ್ರಾರ್ಥಿಸಿದರು. ದೀಪ ಸ್ವಾಗತಿಸಿದರು. ಚೈತ್ರ ಕಾರ್ಯಕ್ರಮದ ವಿವರಣೆಯನ್ನು ದಿವ್ಯಶ್ರೀ ನೀಡಿದರು. ನಾಗಲಕ್ಷ್ಮಿ ಮತ್ತು ಭರತ್ ಕಾರ್ಯಕ್ರಮ ನಿರೂಪಿಸಿದರು.

# ಫಾರ್ಮಾಸಿಸ್ಟ್ ಹುದ್ದೆಗಳಿಗೆ ನೇಮಕ ಮಾಡಲು ಒತ್ತಾಯ



**ಎಸ್.ಎಂ. ರವಿಕುಮಾರ್ ಸರ್ಕಾರಕ್ಕೆ ಮನವಿ**

ದಾವಣಗೆರೆ, ಮೇ 26- ಖಾಲಿ ಇರುವ ಫಾರ್ಮಾಸಿಸ್ಟ್ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಿ, ಹಾಲಿ ಇರುವ ಫಾರ್ಮಾಸಿಸ್ಟ್‌ಗಳ ಮೇಲಿರುವ ಒತ್ತಡ ನಿವಾರಣೆ ಮಾಡಲು ಸಹಕರಿಸುವಂತೆ ಕರ್ನಾಟಕ ರಾಜ್ಯ ಫಾರ್ಮಸಿ ಅಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ರವಿಕುಮಾರ್ ಸರ್ಕಾರಕ್ಕೆ ಮನವಿ ಮಾಡಿದರು.

ನಗರದ ಸರ್ಕಾರಿ ನೌಕರರ ಸಮುದಾಯ ಭವನದ ಆವರಣದಲ್ಲಿರುವ ಮೇರಿ ದೇವದಾಸಿಯ ಮಿನಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಫಾರ್ಮಸಿ ಅಧಿಕಾರಿಗಳ ಸಂಘದ ವತಿಯಿಂದ ಇಂದು ಹಮ್ಮಿಕೊಂಡಿದ್ದ ನಿವೃತ್ತ ಫಾರ್ಮಸಿ ಅಧಿಕಾರಿಗಳಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ದಾವಣಗೆರೆ ಜಿಲ್ಲೆಯ ಫಾರ್ಮಾಸಿಸ್ಟ್ ನೇಮಕಾತಿಯಲ್ಲಿ ಆದ್ಯತೆ ನೀಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಲು ಕೋರಿದರು.

ಜಿಲ್ಲಾ ಔಷಧ ಉಗ್ರಾಣ ಘಟಕದ ವಾಹನ ನವೀಕರಣ ಅವಧಿ ಮುಗಿದಿದ್ದು, ಪರ್ಯಾಯವಾಗಿ ವಾಹನ ಮಂಜೂರು ಮಾಡುವ ಮೂಲಕ ಅನುಕೂಲ ಮಾಡಿಕೊಡುವಂತೆ ಮತ್ತು ಸ್ಟೋರೇಜ್ ಸೌಲಭ್ಯದ ಕೊರತೆ ಕಂಡುಬಂದಿದ್ದು, ಅದನ್ನು ಕೂಡಲೇ ನೀಗಿಸಿ ಔಷಧಿ ಗುಣಮಟ್ಟ ಕಾಪಾಡಲು ಅವಕಾಶ ಮಾಡಿಕೊಡಬೇಕೆಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷ ಎಂ.ಎನ್. ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಪದಾಧಿಕಾರಿಗಳಾದ ಹಾವೇರಿಯ ಪಾಟೀಲ್, ಚಿತ್ರದುರ್ಗದ ನಟರಾಜ್, ವರಶಂಕರ ಅಮಶೆಟ್ಟಿ, ಶ್ರೀಶೈಲಮೂರ್ತಿ, ಸುರೇಶ್, ಎಂ.ಕೆ. ಪ್ರಭುದೇವ್, ಶ್ರೀಮತಿ ಸುಜಾತ, ಮುಜೀಬ್ ಮತ್ತಿತರರು ಉಪಸ್ಥಿತರಿದ್ದರು.

# ಸರ್ಕಾರಿ ವೈದ್ಯ ಕಾಲೇಜು : ಎನ್‌ಆರ್‌ಐ ಕೋಟಾಗೆ ಎಐಡಿಎಸ್‌ಓ ಖಂಡನೆ



ದಾವಣಗೆರೆ, ಮೇ 26- ಸರ್ಕಾರಿ ವೈದ್ಯಕೀಯ ಕಾಲೇಜು ಗಳಲ್ಲಿ ಎನ್‌ಆರ್‌ಐ ಕೋಟಾ ಅಳವಡಿಕೆ ಖಂಡನೀಯವಾಗಿದೆ ಎಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾಗೆ ಅನುಮತಿ ನೀಡುವಂತೆ ಎನ್‌ಎಂಸಿ (ನ್ಯಾಷನಲ್ ಮೆಡಿಕಲ್ ಕಮೀಷನ್)ಗೆ ಮನವಿ ಮಾಡಿದೆ. ಈ ನಡೆಯಿಂದಾಗಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಖಾಸಗೀಕರಣದ ದ್ವಾರ ತೆರೆಯಲಿವೆ ಎಂದು ಎಐಡಿಎಸ್‌ಓ ತೀವ್ರವಾಗಿ ಆಕ್ಷೇಪಿಸಿದೆ.

2018ರಲ್ಲಿ ಎನ್‌ಆರ್‌ಐ ಕೋಟಾದ ಪ್ರಸ್ತಾಪ ಬಂದಾಗ ರಾಜ್ಯದ ವಿದ್ಯಾರ್ಥಿಗಳು ಅದನ್ನು ಯಶಸ್ವಿಯಾಗಿ ವಿರೋಧಿಸಿ ಹಿಮ್ಮೆಟ್ಟಿಸಿದ್ದರು.

ಇಂದು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ವರ್ಷಕ್ಕೆ 80 ಸಾವಿರ ರೂ.ಗಳ ಶುಲ್ಕ ಭರಿಸಬೇಕಿದ್ದು, ಬಡ ವಿದ್ಯಾರ್ಥಿಗಳಿಗೆ ಈ ಶುಲ್ಕ ಭರಿಸುವುದೇ ಕಷ್ಟಕರವಾಗಿದೆ.

ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಅವಕಾಶ ಕಿತ್ತುಕೊಳ್ಳುವ ಎನ್‌ಆರ್‌ಐ ಕೋಟಾ ಅಳವಡಿಕೆ ಪ್ರಜಾತಾಂತ್ರಿಕ ಶಿಕ್ಷಣ ವ್ಯವಸ್ಥೆಯ ಮೇಲೆ ನೇರ ದಾಳಿ ಮಾಡಲಿದ್ದು, ವೈದ್ಯ ಕೀಯ ಶಿಕ್ಷಣ ತನ್ನ ಪ್ರಜಾತಾಂತ್ರಿಕ ಗುಣಲಕ್ಷಣ ಕಳೆದುಕೊಂಡರೆ ಬಡ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯಲು ಅಸಾಧ್ಯವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿ.ಎಂ. ವಿಶ್ವವಿದ್ಯಾಲಯದಲ್ಲಿ ಮಲ್ಲಿಕಾ 2024 ಸಾಂಸ್ಕೃತಿಕ ಹಬ್ಬ




ದಾವಣಗೆರೆ, ಮೇ 26 - ಶೈಕ್ಷಣಿಕ ಸಾಧನೆಗಾಗಿ ಕಾಲೇಜು ಉತ್ಸವದಲ್ಲಿ 20 ಅತ್ಯುತ್ತಮ ವಿದ್ಯಾರ್ಥಿಗಳಿಗೆ ಚಿನ್ನದ ನಾಣ್ಯ ಉಡುಗೊರೆ ನಗರದ ಜಿ.ಎಂ. ವಿಶ್ವವಿದ್ಯಾಲಯ ದಲ್ಲಿ ಮಲ್ಲಿಕಾ 24.0 ಸಾಂಸ್ಕೃತಿಕ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಸಂಗೀತ, ನೃತ್ಯ ಮತ್ತು ಶೈಕ್ಷಣಿಕ ಮನ್ನಣೆಯಿಂದ ಗುರುತಿಸಲ್ಪಟ್ಟ ಒಂದು ಸಂಭ್ರಮದಲ್ಲಿ ಶೈಕ್ಷಣಿಕ ವರ್ಷದಲ್ಲಿ ಇದೇ ಮೊದಲ ಬಾರಿಗೆ 9.5 ಅಥವಾ ಅದಕ್ಕಿಂತ ಹೆಚ್ಚಿನ ಗಮನಾರ್ಹ ಸಂಚಿತ ಗ್ರೇಡ್ ಪಾಯಿಂಟ್ ಸರಾಸರಿ ಅನ್ನು ಸಾಧಿಸಿದ 20 ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ 10 ಗ್ರಾಂ ಚಿನ್ನದ ನಾಣ್ಯಗಳನ್ನು ಲೋಕಸಭಾ ಕ್ಷೇತ್ರದ ಸಂಸದ ಜಿ.ಎಂ. ಸಿದ್ದೇಶ್ವರ ನೀಡುವುದರ ಮೂಲಕ ಗೌರವಿಸಲಾಯಿತು. ಇದುವರೆಗೂ ಒಟ್ಟು 64 ವಿದ್ಯಾರ್ಥಿಗಳು ಈ ಗಮನಾರ್ಹ ಸಾಧನೆ ಮಾಡಿರುತ್ತಾರೆ ಎಂದು ಜಿಎಂಐಟಿ ಕಾಲೇಜಿನ ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ ಎಂ. ಬಿ ತಿಳಿಸಿದರು.

ಚಿನ್ನದ ನಾಣ್ಯಗಳನ್ನು ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಕುಲಪತಿ ಡಾ. ಶಂಖಪಾಲ್ ಎಸ್. ಆರ್ ಶ್ಲಾಘಿಸಿದರು.

ಲೋಕಸಭಾ ಕ್ಷೇತ್ರದ ಸಂಸದ ಜಿ.ಎಂ. ಸಿದ್ದೇಶ್ವರ, ಜಿ.ಎಂ. ಪ್ರಸನ್ನ ಕುಮಾರ್, ಛೇರ್ಮನ್ ಶ್ರೀ ಶ್ರೀಶೈಲ ಎಜುಕೇಶನಲ್ ಟ್ರಸ್ಟ್, ಭೀಮಸಮುದ್ರ, ಆಡಳಿತಾಧಿಕಾರಿ ವೈ.ಯು. ಸುಭಾಷ್ಚಂದ್ರ, ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಮಹೇಶಪ್ಪ, ಜಿಎಂಐಟಿ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ, ರೆಜಿಸ್ಟ್ರಾರ್ ಡಾ. ಸುನಿಲ್ ಕುಮಾರ್ ಬಿ. ಎಸ್ ಹಾಗೂ ಕಾರ್ಯಕ್ರಮದ ಸಂಯೋಜಕರುಗಳಾದ ಡಾ. ಎಚ್. ಎಸ್. ಕಿರಣ್ ಕುಮಾರ್, ಎಂ. ಸಂತೋಷ್ ಕುಮಾರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಆಂಗ್ಲ ನಾಮಫಲಕಕ್ಕೆ ಪರವಾನಿಗೆ ನೀಡಿದ ಅಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹ




ದಾವಣಗೆರೆ, ಮೇ 26- ಆಂಗ್ಲಮಯ ಹಾಗೂ ಕಾನೂನು ಬಾಹಿರ ಫ್ಲೆಕ್ಸ್‌ಗಳಿಗೆ ಪರವಾನಗಿ ನೀಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಮಾಡುವುದಾಗಿ ಕರುನಾಡ ಕನ್ನಡ ಸೇನೆಯ ರಾಜ್ಯಾಧ್ಯಕ್ಷ ಕೆ.ಟಿ ಗೋಪಾಲ ಗೌಡ್ರು ಎಚ್ಚರಿಕೆ ನೀಡಿದ್ದಾರೆ.

ನಾಮಫಲಕ ಹಾಗೂ ಜಾಹಿರಾತು ಫಲಕಗಳಲ್ಲಿ ಶೇ.60ರಷ್ಟು ಕಡ್ಡಾಯ ಕನ್ನಡ ಬಳಕೆ ಆದೇಶ ಉಲ್ಲಂಘಿಸಿ, ಆಂಗ್ಲ ಫ್ಲೆಕ್ಸ್‌ಗಳಿಗೆ ಪಾಲಿಕೆಯು ಅಕ್ರಮವಾಗಿ ಪರವಾನಗಿ ನೀಡಿದೆ ಎಂದು ಆರೋಪಿಸಿದರು.

ಒಂದಕ್ಷರವೂ ಕನ್ನಡ ಬಳಕೆ ಮಾಡದ ಫ್ಲೆಕ್ಸ್ ಅಳವಡಿಕೆಗೆ ಪರವಾನಿಗೆ ನೀಡಿದ ಪಾಲಿಕೆಯು, ಆಯುಕ್ತರ ಹಾಗೂ ಅಧಿಕಾರಿಗಳ ಕನ್ನಡ ವಿರೋಧಿತನಕ್ಕೆ ಸಾಕ್ಷಿಯಾಗಿದೆ ಎಂದು ದೂರಿದರು.

ನಗರದಲ್ಲಿ ಸಾಕಷ್ಟು ಕಾನೂನು ಬಾಹಿರ ಹಾಗೂ ಅವಧಿ ಮೀರಿದ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದು, ವಿದ್ಯುತ್ ಹಾಗೂ ಟ್ರಾಫಿಕ್ ಸಿಗ್ನಲ್ ಕಂಬಗಳ ಮೇಲೆ ಕಟ್ಟಿದ ಫ್ಲೆಕ್ಸ್ ಬೋರ್ಡ್‌ಗಳು ಗಾಳಿ-ಮಳೆಯಿಂದಾಗಿ ವಿದ್ಯುತ್ ಅವಗಢ ಮಾಡಲಿವೆ. ಆದ್ದರಿಂದ ಆಯುಕ್ತರು ಈ ಬಗ್ಗೆ ಗಮನ ಹರಿಸಬೇಕೆಂದು ಆಗ್ರಹಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ಇಲ್ಲ

ಸಿದ್ದವೀರಪ್ಪ ಬಡಾವಣೆ 10, 11 ಮತ್ತು 12ನೇ ಕ್ರಾಸ್ ಸುತ್ತಲಿನ ಪ್ರದೇಶದಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಕಡಿತವಾಗಲಿದೆ.

# ಕ್ರೀಡಾಪಟುಗಳ ಶ್ರಮಕ್ಕೆ ತಕ್ಕಂತೆ ನ್ಯಾಯಯುತ ಫಲಿತಾಂಶ ನೀಡಿ




**ಖೋ-ಖೋ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಲೋಕೇಶ್**

ದಾವಣಗೆರೆ, ಮೇ 26- ತೀರ್ಪುಗಾರರು ಕ್ರೀಡಾ ಪಟುಗಳ ಶ್ರಮಕ್ಕೆ ನ್ಯಾಯಯುತ ಫಲಿತಾಂಶ ನೀಡಬೇಕು ಎಂದು ಖೋ-ಖೋ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಲೋಕೇಶ್ ಹೇಳಿದರು.

ನಗರದ ಸಿದ್ದಗಂಗಾ ಶಾಲೆಯಲ್ಲಿ ರಾಜ್ಯ ಖೋ-ಖೋ ಅಸೋಸಿಯೇಷನ್ ಹಾಗೂ ಚಾಲೆಂಜರ್ಸ್ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ಈಚೆಗೆ ನಡೆದ ಆಲ್ ಇಂಡಿಯಾ ಖೋ-ಖೋ ರೆಫರಿ ಪರೀಕ್ಷೆ ಮತ್ತು ರಾಜ್ಯ ಖೋ-ಖೋ ರೆಫರಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೆಫರಿಗಳು ಕೇವಲ ಪ್ರಮಾಣ ಪತ್ರಕ್ಕೆ ಸೀಮಿತವಾಗದೇ ಶಿಸ್ತು ಮತ್ತು ಸಮಯ ಪ್ರಜ್ಞೆಯಿಂದ ತೀರ್ಪು ನೀಡಬೇಕು ಮತ್ತು ಖೋ-ಖೋ ನಿಯಮಗಳ ಬಗ್ಗೆ ಹೆಚ್ಚೆಚ್ಚು ತಿಳಿದುಕೊಳ್ಳುವಂತೆ ಎಂದು ಸಲಹೆ ನೀಡಿದರು.

ಕೆಎಸ್‌ಕೆಕೆಎ ಅಧ್ಯಕ್ಷ ಪುರುಷೋತ್ತಮ್ ಮಾತನಾಡಿ, ಕಾರ್ಯಾಗಾರದಲ್ಲಿ ಕಲಿತ ಜ್ಞಾನವನ್ನು ವ್ಯರ್ಥ ಮಾಡದೇ ಪ್ರತಿ ದಿನ ಮಕ್ಕಳಿಗೆ ತರಬೇತಿ ನೀಡಬೇಕು ಎಂದರು. ಚಾಲೆಂಜರ್ಸ್ ಸ್ಪೋರ್ಟ್ ಕ್ಲಬ್‌ನ ಅಧ್ಯಕ್ಷ ತ್ರಿಲೋಕ್ ಸಿಂಗ್ ಮಾತನಾಡಿ, ಇಂದಿನ ಕ್ರೀಡಾಪಟುಗಳಿಗೆ ಎಲ್ಲ ತರಹದ ಸೌಕರ್ಯಗಳಿವೆ. ಒಳ್ಳೆಯ ತರಬೇತಿ ಹಾಗೂ ಕಾರ್ಯಾಗಾರದ ಸಹಾಯದಿಂದ ಉತ್ತಮ ಕ್ರೀಡಾಪಟು ಹಾಗೂ ರೆಫರಿಗಳಾಗಿ ಎಂದು ಕರೆ ನೀಡಿದರು.

ಮಲ್ಲಿಕಾರ್ಜುನಯ್ಯ, ಪ್ರಶಾಂತ್ ಪಠಾಣ್‌ಕರ್, ಬಸವರಾಜ್ ಚಿಲಕಾಂತ್ ಮಠ, ಸಿದ್ದಲಿಂಗ ಮೂರ್ತಿ, ಶ್ರೀನಿವಾಸ ಕೆ.ಸಿ. ಇಟ್ಟಿಗುಡಿ, ಜಿಲ್ಲಾ ಖೋ-ಖೋ ಸಂಸ್ಥೆಯ ಜಿ.ಡಿ.ಎಸ್. ಮೂರ್ತಿ, ಚಾಲೆಂಜರ್ಸ್ ಸ್ಪೋರ್ಟ್ಸ್ ಕ್ಲಬ್‌ನ ಪದಾಧಿಕಾರಿಗಳು ಇದ್ದರು.

ಶ್ರೇಯಾ ಪ್ರಾರ್ಥಿಸಿದರು. ಡಿ.ಕೆ.ಕೆ.ಎ ಕಾರ್ಯದರ್ಶಿ ಜೆ. ರಾಮಲಿಂಗಪ್ಪ ಪ್ರಾಸ್ತಾವಿಕ ಮಾತನಾಡಿದರು. ಸಂಘಟನಾ ಕಾರ್ಯದರ್ಶಿ ಡಾ. ಚಂದ್ರಶೇಖರ್ ನಿರೂಪಿಸಿದರು. ಡಾ.ವೀರೇಂದ್ರ ವಂದಿಸಿದರು.

# ಪರಿಷತ್ ಸದಸ್ಯರಾಗಿ ಎಸ್. ದ್ವಾರಕನಾಥ್ ನೇಮಕಕ್ಕೆ ಒತ್ತಾಯ



ದಾವಣಗೆರೆ, ಮೇ 26- ಡಾ ಸಿ.ಎಸ್. ದ್ವಾರಕನಾಥ್ ಅವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡಬೇಕು ಎಂದು ಕಾಂಗ್ರೆಸ್ ನ್ಯಾಯ ಸಮಿತಿ ಜಿಲ್ಲಾಧ್ಯಕ್ಷರೂ ಆದ ಹಾಗೂ ಹಿರಿಯ ನ್ಯಾಯವಾದಿ ಎಸ್. ಪರಮೇಶ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಹಿಂದ ರೂವಾರಿಗಳಾಗಿ, ಸಮಾಜದ ಕಟ್ಟಕಡೆಯ ಸಮುದಾಯಗಳ ಒಡನಾಟ ಹಾಗೂ ನಿರಂತರವಾಗಿ ಅವರ ಜೀವನದುದ್ದಕ್ಕೂ ಹೋರಾಟ ಮಾಡುತ್ತಾ ಬಂದಿರುವ ದ್ವಾರಕಾನಾಥ್ ಅವರಿಗೆ ಪರಿಷತ್ತಿಗೆ ನೇಮಕ ಮಾಡಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಾಬು ಗೋಸಾಯಿ, ಎಲ್.ಶ್ಯಾಮ್, ಮಹಮ್ಮದ್ ಸಮೀವುಲ್ಲಾ, ಕವಿತಾ ಚಂದ್ರಶೇಖರ್ , ಮುಬಾರಕ್, ಸಾದಿಕ್, ಫೈಯಾಜ್ ಅಹಮದ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದಿನಿಂದ ಎಸ್‌ಎಸ್‌ವೈ ತರಬೇತಿ

ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿನ ಶ್ರೀ ಗಣಪತಿ ದೇವಸ್ಥಾನದಲ್ಲಿ ಸಿದ್ಧ ಸಮಾಧಿ ಯೋಗ ತರಗತಿಗಳು ಇಂದಿನಿಂದ ಆರಂಭವಾಗಲಿವೆ ಎಂದು ರೇಣುಕಾ ಮಾತಾಜಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9964675441, 9448667523.

# ಹರಿಹರದ ಕೆಹೆಚ್‌ಬಿ ಕಾಲೋನಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ನಿವಾಸಿಗಳ ಆಗ್ರಹ



ಹರಿಹರ, ಮೇ 26 - ನಗರದ ಹೊಸ ಕೋರ್ಟ್ ಹಿಂಬದಿಯ ಕೆ.ಹೆಚ್.ಬಿ. ಕಾಲೋನಿ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ನಗರಸಭೆಯ ಅಧಿಕಾರಿಗಳು ಆದಷ್ಟು ಬೇಗನೆ ಸಮಸ್ಯೆಯನ್ನು ಪರಿಹರಿಸಲು ಮುಂದಾಗುವಂತೆ ಕೆ.ಹೆಚ್.ಬಿ. ಕಾಲೋನಿ ನಿವಾಸಿಗಳಾದ ಎಸ್. ಸತೀಶ್ ಹುಲಸೂರು, ಎರ್ರಿಸ್ವಾಮಿ, ರಾಮಕೃಷ್ಣ ಶರ್ಮ ಇತರರು ಆಗ್ರಹಿಸಿದರು.

ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಎಸ್. ಸತೀಶ್ ಹುಲಸೂರು ಮಾತನಾಡಿ, ಕೆ.ಹೆಚ್.ಬಿ. ಕಾಲೋನಿ ನಿರ್ಮಾಣಗೊಂಡು 14 ವರ್ಷ ಕಳೆದಿದೆ. ಸಹಸ್ರಾರು ಸಂಖ್ಯೆಯಲ್ಲಿ ಜನರು ವಾಸವಾಗಿದ್ದಾರೆ. ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತ ಚರಂಡಿ, ಪಾರ್ಕ್, ವಿದ್ಯುತ್ ದ್ವೀಪದ ಸೌಲಭ್ಯ ಒದಗಿಸುವಲ್ಲಿ ನಗರಸಭೆ ನಿರ್ಲಕ್ಷ್ಯ ವಹಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಲೋನಿಯಲ್ಲಿರುವ ನೀರಿನ ಟ್ಯಾಂಕನ್ನು ಹಲವಾರು ವರ್ಷಗಳಿಂದ ಸ್ವಚ್ಛತೆ ಮಾಡಿರುವುದಿಲ್ಲ. ಯುಜಿಡಿ ಕಾಮಗಾರಿ ಮಾಡಿದ್ದರೂ ಕೆಲವೊಂದು ಮನೆಗಳಲ್ಲಿ ಚರಂಡಿ ನೀರು ವಾಪಸ್ ಬರುತ್ತದೆ. ರಸ್ತೆಗಳಿಗೆ ಪ್ರತಿವರ್ಷ ಮಣ್ಣು ಹಾಕಿ ರಸ್ತೆ ಅಭಿವೃದ್ಧಿಪಡಿಸಲಾಗಿದೆ ಎಂದು ಲಕ್ಷಾಂತರ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿದ್ದಾರೆ. 24/7 ಕುಡಿಯುವ ನೀರಿನ ಪೈಪ್ ಲೈನ್ ಕೆಲವೊಂದು ಮನೆಗಳಿಗೆ ಮಾತ್ರ ಹಾಕಿ, ಉಳಿದಂತೆ ಎಲ್ಲಾ ಮನೆಗಳಿಗೆ ಸಂಪರ್ಕವನ್ನು ನೀಡದೇ ಇರುವುದರಿಂದ ನೀರಿನ ಸಮಸ್ಯೆ ಬಹಳಷ್ಟಿದೆ.

ಜಾಲಿ ಗಿಡಗಳು ಎಲ್ಲೆಂದರಲ್ಲಿ ಬೆಳೆದಿದ್ದು ಹಾವು, ಚೇಳು ಸೇರಿದಂತೆ ಅನೇಕ ಹುಳ ಉಪ್ಪಡಿಗಳ ತಾಣವಾಗಿದೆ. ಬೀದಿ ನಾಯಿಗಳು, ಹಂದಿಗಳ ಉಪಟಳ ಹೇಳ ತೀರದಾಗಿದೆ. ಹಿರಿಯ ನಾಗರಿಕರಿಗೆ ವಿಶ್ರಾಂತಿ ಸೌಕರ್ಯದ ಜೊತೆಗೆ ಮಕ್ಕಳಿಗೆ ಆಟದ ಮೈದಾನ ಸೇರಿದಂತೆ ಅನೇಕ ಮೂಲಭೂತ ಸೌಕರ್ಯಗಳ ಕೊರತೆ ಇದೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ಶಾಸಕ ಬಿ.ಪಿ. ಹರೀಶ್ ಮತ್ತು ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್ ಗಮನಕ್ಕೆ ತರಲಾಯಿತು.

ಆದರೆ, ಇಲ್ಲಿನ ಬಡಾವಣೆ ನಗರಸಭೆ ವ್ಯಾಪ್ತಿಗೆ ಇತ್ತೀಚಿನ ದಿನಗಳಲ್ಲಿ ಸೇರಿರುವುದರಿಂದ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಹಣದ ಕೊರತೆಯ ಕಾರಣ ಯಾವುದೇ ರೀತಿಯ ಅಭಿವೃದ್ಧಿ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ.

ಸಿದ್ದಲಿಂಗಸ್ವಾಮಿ, ರಾಮಕೃಷ್ಣ ಶರ್ಮ, ಹೆಚ್. ಎಂ. ವೀರಯ್ಯ ಇತರರು ಮಾತನಾಡಿದರು.

ಹೆಚ್. ನಿಜಗುಣ, ರಾಮಮೂರ್ತಿ, ರಾಜೇಶ್, ರೇವಣಸಿದ್ದಪ್ಪ ಅಮರಾವತಿ, ಪ್ರದೀಪ್ ತೇಲ್ಕರ್, ಮಹಾಂತೇಶ್, ಚಂದ್ರಶೇಖರ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸಾಮಾಜಿಕ ನ್ಯಾಯ : ನಗರದಲ್ಲಿ ಇಂದು ತರಬೇತಿ

ಆಕ್ಷನ್ ಇನ್ಷಿಯೇಟಿವ್ ಫಾರ್ ಡೆವಲಪ್‌ಮೆಂಟ್ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಇವರ ಜಂಟಿ ಆಶ್ರಯದಲ್ಲಿ ಯುವಕ - ಯುವತಿಯರಾಗಿ ಸಾಮಾಜಿಕ ನ್ಯಾಯ ಕುರಿತು ತರಬೇತಿ ಶಿಬಿರವು ವನಿತಾ ಸಮಾಜದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಉದ್ಘಾಟನೆ : ನ್ಯಾ. ಮಹಾವೀರ ಮ. ಕರೆಣ್ಣನವರ್, ಅಧ್ಯಕ್ಷತೆ : ಡಿ.ಎಸ್. ಬಾಬಣ್ಣ. ಮುಖ್ಯ ಅತಿಥಿಗಳು : ಎಲ್.ಹೆಚ್. ಅರುಣ್ ಕುಮಾರ್, ಕೆ. ನಾಗರಾಜ್, ಹೆಚ್. ಮಲ್ಲೇಶ್, ನಸ್ರಿನ್ ಮಿಠಾಯಿ.

# ಬಹುಸಂಖ್ಯಾತರನ್ನು 2ನೇ ದರ್ಜೆ ನಾಗರಿಕರಾಗಿಸುವ ಹುನ್ನಾರ

ನವದೆಹಲಿ, ಮೇ 26 - ಭಾರತದ ಬಹುಸಂಖ್ಯಾತರನ್ನು ಎರಡನೇ ದರ್ಜೆ ನಾಗರಿಕರನ್ನಾಗಿ ಮಾಡಲು ಐ.ಎನ್.ಡಿ.ಐ.ಎ. ಬಣದ ಪಕ್ಷಗಳು ಬಯಸಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ.



ಉತ್ತರ ಪ್ರದೇಶದ ಘೋಸಿ ಎಂಬಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರತಿಪಕ್ಷಗಳು ಸಂವಿಧಾನ ಬದಲಿಸಿ ಧರ್ಮದ ಆಧಾರದ ಮೇಲೆ ಮೀಸಲಾತಿ ಜಾರಿಗೆ ತರಲು ಬಯಸಿವೆ ಎಂದು ಆರೋಪಿಸಿದರು.

ಐ.ಎನ್.ಡಿ.ಐ.ಎ. ಪಕ್ಷಗಳು ಜಾತಿಗಳ ನಡುವೆ ಸಂಘರ್ಷ ತರುತ್ತಿವೆ. ಎಸ್.ಸಿ., ಎಸ್.ಟಿ., ಒ.ಬಿ.ಸಿ. ವರ್ಗದವರಿಗೆ ನೀಡಲಾಗುತ್ತಿರುವ ಮೀಸಲಾತಿಗಳೆಲ್ಲವನ್ನೂ ಮುಸ್ಲಿಮರಿಗೆ ನೀಡುವ ಹುನ್ನಾರ ನಡೆಸಿವೆ ಎಂದು ಆರೋಪಿಸಿದರು.

ಸಮಾಜವಾದಿ ಪಕ್ಷ ಹಾಗೂ ಐ.ಎನ್.ಡಿ.ಎ. ಬಣದ ಪಕ್ಷಗಳು ಜಾತಿಗಳ ನಡುವೆ ಸಂಘರ್ಷ ಸೃಷ್ಟಿಸಿ ಅವರನ್ನು ದುರ್ಬಲ ಮಾಡುತ್ತಿವೆ. ನಿಜವಾದ ವಿಷಯಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಈ ರೀತಿ ಮಾಡಲಾಗುತ್ತಿದೆ ಎಂದು ಮೋದಿ ಆರೋಪಿಸಿದ್ದಾರೆ.

ಮುಸ್ಲಿಮರ ಜಾತಿಗಳನ್ನು ಒ.ಬಿ.ಸಿ. ಎಂದು ರಾತ್ರೋ ರಾತ್ರಿ ಘೋಷಣೆ ಮಾಡಲಾಗುತ್ತಿದೆ. ಇತ್ತೀಚೆಗೆ ಕಲ್ಕತ್ತಾ ಹೈಕೋರ್ಟ್ ಮುಸ್ಲಿಮರ 77 ಜಾತಿಗಳಿಗೆ ನೀಡಲಾಗಿದ್ದ ಒ.ಬಿ.ಸಿ. ಮೀಸಲಾತಿ ರದ್ದುಗೊಳಿಸಿತ್ತು ಎಂದವರು ಹೇಳಿದರು.

ಮುಸ್ಲಿಮರಿಗೂ ದಲಿತರ ರೀತಿಯ ಮೀಸಲಾತಿ ನೀಡುವುದಾಗಿ ಸಮಾಜವಾದಿ ಪಕ್ಷವು 2012ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿತ್ತು. ಕಾಂಗ್ರೆಸ್ ಪಕ್ಷವು ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಎಂದು ಘೋಷಿಸುವ ಮೂಲಕ ಮುಸ್ಲಿಮರಿಗೆ ಅಲ್ಲಿ ಮೀಸಲಾತಿ ಕಲ್ಪಿಸಿತ್ತು ಎಂದು ಮೋದಿ ತಿಳಿಸಿದರು.

2014ಕ್ಕೆ ಮುಂಚೆ ಕಾಂಗ್ರೆಸ್ ಪಕ್ಷ ರಾತ್ರೋ ರಾತ್ರಿ ಕಾನೂನು ಬದಲಿಸಿ ಶಾಲೆಗಳು, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳನ್ನು ಅಲ್ಪಸಂಖ್ಯಾತ ಸಂಸ್ಥೆಗಳೆಂದು ಘೋಷಿಸಿತ್ತು. ಈ ಹಿಂದೆ ಈ ಶಾಲೆಗಳಲ್ಲಿ ಎಸ್.ಸಿ., ಎಸ್.ಟಿ., ಹಾಗೂ ಒ.ಬಿ.ಸಿ. ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಮೀಸಲಾತಿ ರದ್ದುಗೊಳಿಸಲಾಯಿತು. ಅಲ್ಲಿ ಮುಸ್ಲಿಮರು ಮೀಸಲಾತಿ ಪಡೆದರು ಎಂದು ಪ್ರಧಾನಿ ಹೇಳಿದರು.

ದಲಿತರು, ಹಿಂದುಳಿದವರು ಹಾಗೂ ಬುಡಕಟ್ಟು ಜನರ ಮಕ್ಕಳಿಗೆ ಇದಕ್ಕಿಂತ ದೊಡ್ಡ ದ್ರೋಹ ಇನ್ನೊಂದಿದೆಯೇ? ಎಂದೂ ಅವರು ಪ್ರಶ್ನಿಸಿದರು.

# ರಾಜ್ಯ ರ್‍ಯಾಂಕಿಂಗ್ ಸಬ್ ಜ್ಯೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬೆಂಗಳೂರಿನ ಶೈನಾ ಚಾಂಪಿಯನ್

ದಾವಣಗೆರೆ, ಮೇ 26 - ಬೆಂಗಳೂರಿನ ಶೈನಾ ಮಣಿಮುತ್ತು ರಾಜ್ಯ ರ್‍ಯಾಂಕಿಂಗ್ ಸಬ್ ಜ್ಯೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯ 15 ಹಾಗೂ 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.




ಇಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ನಿನ್ನೆ ಶನಿವಾರ ನಡೆದ ಬಾಲಕಿಯರ ರೋಚಕ ಫೈನಲ್ ಹಣಾಹಣಿಯಲ್ಲಿ ಶೈನಾ, ಅಗ್ರ ಶ್ರೇಯಾಂಕಿತೆ ಮೈಸೂರಿನ ದಿಯಾ ಭೀಮಯ್ಯ ವಿರುದ್ಧ 21-19, 21-14 ಗೇಮ್‌ಗಳಿಂದ ಜಯ ಪಡೆದರು.

ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಮೈಸೂರಿನ ಹಾರ್ದಿಕ್ ದಿವ್ಯಾನ್ಶ್, ಬೆಂಗಳೂರಿನ 3ನೇ ಶ್ರೇಯಾಂಕಿತ ಇಶಾನ್ ನಾಯ್ಕ 21-17, 21-19 ರಿಂದ ಗೆಲುವು ಸಾಧಿಸಿದರು.

ಬಾಲಕರ ಡಬಲ್ಸ್ ಫೈನಲ್ ಪಂದ್ಯದಲ್ಲಿ ಅಮಿತ್‌ರಾಜ್-ಹಾರ್ದಿಕ್ ದಿವ್ಯಾನ್ಶ್ ಜೋಡಿ, ಚಿಕ್ಕಮಗಳೂರಿನ ಯದುನಂದನ್-ವಂಶಿ ಜೋಡಿ ವಿರುದ್ಧ 17-21, 21-9, 21-14 ಗೇಮ್‌ಗಳ ಅಂತರದಲ್ಲಿ ಪ್ರಯಾಸದ ಗೆಲುವು ಸಾಧಿಸಿತು.

**ಸಾಯಿ ಪುಷ್ಕರ್‌ಗೆ ಪ್ರಶಸ್ತಿ:**

15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಬೆಂಗಳೂರಿನ ಸಾಯಿ ಪುಷ್ಕರ್, ಅಗ್ರ ಶ್ರೇಯಾಂಕಿತ ಮೈಸೂರಿನ ಶ್ಯಾಮ್ ಬಿಂಡಿಗನವಿಲೆ ವಿರುದ್ಧ 21-11, 21-23, 21-18ರಿಂದ ಗೆಲುವಿನ ನಗೆ ಬೀರಿದರು.

## 15, 17 ವರ್ಷದೊಳಗಿನ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ

ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಬೆಂಗಳೂರಿನ ಶೈನಾ ಮಣಿಮುತ್ತು, ಅಗ್ರ ಶ್ರೇಯಾಂಕಿತೆ ಐಕ್ಯಶೆಟ್ಟಿ ವಿರುದ್ಧ 21-18, 11-5ರಿಂದ ಜಯ ಪಡೆದರು.

ಬಾಲಕರ ಡಬಲ್ಸ್ ಫೈನಲ್‌ನಲ್ಲಿ ಪಿಯೂಷ್ ತ್ರಿಪಾಠಿ-ಶ್ಯಾಮ್ ಬಿಂಡಿಗನವಿಲೆ ಜೋಡಿ, ಬೆಂಗಳೂರಿನ ಹರ್ಷವರ್ಧನ್-ನಿಕೇತನ್ ಹರಿ ಜೋಡಿ ವಿರುದ್ಧ 21-11, 21-14ರಿಂದ ಜಯ ಸಾಧಿಸಿತು.

ಬಾಲಕಿಯರ ಡಬಲ್ಸ್ ಅಂತಿಮ ಹಣಾಹಣಿಯಲ್ಲಿ ನಿಧಿ ಆತ್ಮರಾಮ್-ಸೆಲ್ವಾ ಸಮೃದ್ಧಿ ಜೋಡಿ, ಅವನಿ ಕುಲಕರ್ಣಿ-ತನ್ವಿ ಮನೋತ್ ಜೋಡಿ ಎದುರು 21-12, 21-10ರಿಂದ ಗೆಲುವು ಪಡೆದರು.

ಬಹುಮಾನ ವಿತರಣೆ ಸಮಾರಂಭದಲ್ಲಿ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಎನ್. ಬಸವರಾಜ್, ಕಾರ್ಯದರ್ಶಿ ಡಿ.ಆರ್. ಗಿರಿರಾಜ್, ಉಪಾಧ್ಯಕ್ಷ ಕೆ. ಹೆಚ್. ಸಿದ್ದೇಶ್ವರ, ಖಜಾಂಚಿ ಇಸ್ಮಾಯಿಲ್ ಮತ್ತು ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಕಾರ್ಯದರ್ಶಿ ರಾಜೇಶ್, ಶಿವರಾಜ್ ಮಾತೂರ್ ಹಾಗೂ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ಪದಾಧಿಕಾರಿಗಳಾದ ಬೇತೂರು ಕರಿಬಸಪ್ಪ, ಶಶಿಧರ ಆಚಾರ್, ಎಂ.ಆರ್. ಸ್ವಾಮಿ, ಅಭಿ, ಗಂಗಾಧರ ಮತ್ತಿತರರು ಉಪಸ್ಥಿತರಿದ್ದರು.

# ರಾಜಧಾನಿ ಯಾವುದಯ್ಯಾ ಆಂಧ್ರಕ್ಕೆ?

ಅಮರಾವತಿ, ಮೇ 26 - ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳು ವಿಭಜನೆಯಾದ ಹತ್ತು ವರ್ಷಗಳ ನಂತರವೂ, ಆಂಧ್ರ ನೂತನ ರಾಜಧಾನಿ ನಿರ್ಮಿಸಿಕೊಳ್ಳಲು ಸಾಧ್ಯವಾಗಿಲ್ಲ.

ಇದುವರೆಗೂ ಹೈದರಾಬಾದ್ ಎರಡೂ ರಾಜ್ಯಗಳ ಜಂಟಿ ರಾಜಧಾನಿಯಾಗಿತ್ತು. ಈ ವ್ಯವಸ್ಥೆ ಜೂನ್ 2ರಂದು ಅಂತ್ಯವಾಗಲಿದೆ. ಮುಂದಿನ ಪರಿಸ್ಥಿತಿ ಏನಾಗಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಕ್ಕೆ ಪ್ರತ್ಯೇಕ ರಾಜಧಾನಿಗಳು ಬೇಕು ಎಂದು ಆಂಧ್ರ ಪ್ರದೇಶದ ಆಡಳಿತಾರೂಢ ವೈ.ಎಸ್.ಆರ್.ಸಿ.ಪಿ. ಬಯಸಿದೆ. ಪ್ರತಿಪಕ್ಷವಾದ ಟಿ.ಡಿ.ಪಿ. ಒಂದೇ ರಾಜಧಾನಿ ಇರಬೇಕು ಎಂಬ ನಿಲುವು ಹೊಂದಿದೆ. ಈ ವಿಷಯ ಸದ್ಯಕ್ಕೆ ಸುಪ್ರೀಂ ಕೋರ್ಟ್ ಎದುರಿನಲ್ಲಿದೆ.

ವಿಭಜಿತ ಆಂಧ್ರ ಹಾಗೂ ತೆಲಂಗಾಣಗಳಿಗೆ ಹತ್ತು ವರ್ಷ ಕಾಲ ಹೈದರಾಬಾದ್ ಜಂಟಿ ರಾಜಧಾನಿಯಾಗಿರಲಿದೆ ಎಂದು ಮಾರ್ಚ್ 1, 2014ರಲ್ಲಿ ನಿರ್ಧರಿಸಲಾಗಿತ್ತು. ಹೀಗಾಗಿ ಜೂನ್ 2, 2024ರ ನಂತರ ಹೈದರಾಬಾದ್ ಕೇವಲ ತೆಲಂಗಾಣದ ರಾಜಧಾನಿಯಾಗಿ ಉಳಿಯಲಿದೆ.

ಅಮರಾವತಿಯನ್ನು ಆಂಧ್ರ ಪ್ರದೇಶದ ನೂತನ ರಾಜಧಾನಿ ಮಾಡಲು ಈ ಹಿಂದೆ ಅಧಿಕಾರದಲ್ಲಿದ್ದ ಟಿ.ಡಿ.ಪಿ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ನಿರ್ಧರಿಸಿದ್ದರು. ಆದರೆ, ಈ ರಾಜಧಾನಿ ಸ್ಥಾಪನೆಗೆ ಹಲವು ತೊಡಕುಗಳು ಎದುರಾಗಿದ್ದವು.



## ಜೂ.2ರಂದು ಮುಗಿಯಲಿದೆ ಜಂಟಿ ರಾಜಧಾನಿಯ ಗಡುವು

2019ರಲ್ಲಿ ಅಧಿಕಾರಕ್ಕೆ ಬಂದ ವೈ.ಎಸ್.ಆರ್.ಸಿ.ಪಿ.ಯ ವೈ.ಎಸ್. ಜಗನ್ ಮೋಹನ್ ರೆಡ್ಡಿ, ಮೂರು ರಾಜಧಾನಿಗಳ ಸ್ಥಾಪನೆಗೆ ನಿರ್ಧರಿಸಿದ್ದರು.

ಅಮರಾವತಿ ಶಾಸಕಾಂಗದ ರಾಜಧಾನಿ, ಕರ್ನೂಲು ನ್ಯಾಯಾಂಗದ ರಾಜಧಾನಿ ಹಾಗೂ ವಿಶಾಖಪಟ್ಟಣ ಕಾರ್ಯಾಂಗದ ರಾಜಧಾನಿಯಾಗಲಿದೆ. ನಾನು ವಿಶಾಖಪಟ್ಟಣದಿಂದಲೇ ಕಾರ್ಯನಿರ್ವಹಿಸುತ್ತೇನೆ ಎಂದು ರೆಡ್ಡಿ ಹೇಳಿದ್ದರು.

ಆದರೂ, ಅವರು ವಿಶಾಖಪಟ್ಟಣಕ್ಕೆ ಸ್ಥಳಾಂತರಗೊಳ್ಳಲು ಸಾಧ್ಯವಾಗಿಲ್ಲ. ಕಾನೂನು ತೊಡಕುಗಳ ಕಾರಣದಿಂದಾಗಿ ಅವರ ಮೂರು ರಾಜಧಾನಿ ಬಯಕೆ ಈಡೇರಿಲ್ಲ.

ಇನ್ನಷ್ಟು ಕಾಲ ಹೈದರಾಬಾದ್ ಅನ್ನು ಜಂಟಿ ರಾಜಧಾನಿಯಾಗಿ ಮುಂದುವರೆಸಬೇಕು ಎಂದು ಜೈ ಭಾರತ್ ನ್ಯಾಷನಲ್ ಪಾರ್ಟಿಯ ಮುಖ್ಯಸ್ಥ ವಿ.ವಿ. ಲಕ್ಷ್ಮಿನಾರಾಯಣ ಅಭಿಪ್ರಾಯ ಪಟ್ಟಿದ್ದಾರೆ.

ಆದರೆ, ಅಮರಾವತಿ ಒಂದೇ ರಾಜಧಾನಿಯಾಗಿರಬೇಕು. ಅಭಿವೃದ್ಧಿಯ ವಿಕೇಂದ್ರೀಕರಣವಾಗಬೇಕು. ಪ್ರತಿಯೊಂದು ಜಿಲ್ಲೆಯೂ ಅಭಿವೃದ್ಧಿಯಾಗಬೇಕು ಎಂದು ಟಿ.ಡಿ.ಪಿ. ಪ್ರಧಾನ ಕಾರ್ಯದರ್ಶಿ ನಾರಾ ಲೋಕೇಶ್ ಹೇಳಿದ್ದಾರೆ.

ಮೂರು ರಾಜಧಾನಿಗಳ ಮೂಲಕ ವಿಕೇಂದ್ರೀಕರಣ ಹಾಗೂ ಉತ್ತಮ ಆಡಳಿತ ಸಾಧ್ಯವಾಗಲಿದೆ ಎಂದು ವೈ.ಎಸ್.ಆರ್.ಸಿ.ಪಿ. ರಾಜ್ಯಸಭಾ ಸದಸ್ಯ ಅಯೋಧ್ಯ ರಾಮಿ ರೆಡ್ಡಿ ಹೇಳಿದ್ದಾರೆ.

ಈ ಭಿನ್ನ ನಿಲುವುಗಳ ನಡುವೆ, ಜೂನ್ 4ರಂದು ಲೋಕಸಭೆ ಹಾಗೂ ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಗಳೆರಡರ ಫಲಿತಾಂಶ ಹೊರ ಬೀಳಲಿದೆ. ಇದು ರಾಜಧಾನಿಯ ಮುಂದಿನ ಭವಿಷ್ಯವನ್ನು ಸ್ಪಷ್ಟಪಡಿಸಲಿದೆ ಎಂಬ ನಿರೀಕ್ಷೆ ಇದೆ.

# ಎಸ್ಸೆಸ್ಸೆಲ್ಸಿಯಲ್ಲಿ ಜಿಲ್ಲೆಗೆ ಗಾನವಿ ಪ್ರಥಮ

## ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್‌ನಿಂದ ಸನ್ಮಾನ



ದಾವಣಗೆರೆ, ಮೇ 26- - ಈಚೆಗೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ದಾವಣಗೆರೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆಯುವುದರ ಮೂಲಕ ದಾವಣಗೆರೆ ಜಿಲ್ಲೆಗೆ ಕೀರ್ತಿ ತಂದಿರುವ ನಗರದ ಸಿದ್ಧಗಂಗಾ ಪ್ರೌಢಶಾಲೆಯ ವಿದ್ಯಾರ್ಥಿನಿ ಕು. ಹೆಚ್.ಜಿ. ಗಾನವಿ ಅವರನ್ನು ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ವತಿಯಿಂದ ಗೌರವಿಸಲಾಯಿತು.

ಬ್ಯಾಂಕಿನ ಸಭಾಂಗಣದಲ್ಲಿ ನಿನ್ನೆ ನಡೆದ ಸರಳ ಸಮಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ಗಾನವಿ ಅವರನ್ನು ಶಾಲು ಹೊದಿಸಿ, ಸ್ಮರಣಿಕೆಯೊಂದಿಗೆ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುರುಗೇಶ್, ಮಕ್ಕಳು ಓದಿನಲ್ಲಿ ಯಶಸ್ಸು ಗಳಿಸಬೇಕು, ಉತ್ತಮ ಅಂಕ ತೆಗೆಯಬೇಕು ಎಂಬ ಆಸೆ ಪ್ರತಿ ಪೋಷಕರಲ್ಲೂ ಇರುವುದು ಸಹಜ. ಯಶಸ್ವಿ ಮಕ್ಕಳು ಅನುಸರಿಸುವ ಕ್ರಮವನ್ನು ಪೋಷಕರು ತಿಳಿದುಕೊಂಡು ಅದಕ್ಕೆ ಪ್ರೋತ್ಸಾಹ ನೀಡುವುದು ಮುಖ್ಯವಾಗುತ್ತದೆ. ಗಾನವಿ ಬೇರೆ ಮಕ್ಕಳಿಗೂ ಸ್ಫೂರ್ತಿಯಾಗಿದ್ದು, ನಗರಕ್ಕೆ ಕೀರ್ತಿ ತಂದಿರುವುದು ಹೆಮ್ಮೆಯ ವಿಷಯ ಎಂದು ಸಂತಸ ವ್ಯಕ್ತಪಡಿಸಿದರು.

ಗಾನವಿ ಜೆ.ಹೆಚ್. ಪಟೇಲ್ ಬಡಾವಣೆಯ ಹೆಚ್.ಎನ್. ಗಿರೀಶ್ ಮತ್ತು ಶ್ರೀಮತಿ ಜ್ಯೋತಿ ದಂಪತಿ ಪುತ್ರಿ.

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ಪರಶುರಾಮಪ್ಪ, ವ್ಯವಸ್ಥಾಪನಾ ಮಂಡಲಿಯ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕ ಎ.ಹೆಚ್. ಕುಬೇರಪ್ಪ, ನಿರ್ದೇಶಕರುಗಳಾದ ಕಿರುವಾಡಿ ವಿ. ಸೋಮಶೇಖರ್, ಶಂಕರ್ ಖಟಾವ್‌ಕರ್, ಎಸ್.ಕೆ. ಪ್ರಭು ಪ್ರಸಾದ್, ಕೆ.ಎಂ. ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ. ನಾಗೇಂದ್ರಚಾರಿ, ಬಿ. ಚಿದಾನಂದಪ್ಪ, ಎ. ಕೊಟ್ರೇಶ್, ಶ್ರೀಮತಿ ಉಮಾ ವಾಗೀಶ್, ವಿಶಾಲ್ ಕುಮಾರ್ ಆರ್. ಸಂಘವಿ, ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್, ಶ್ರೀಮತಿ ಅನೂಪ ಡಾ|| ವೀರೇಂದ್ರಸ್ವಾಮಿ, ವೃತ್ತಿಪರ ನಿರ್ದೇಶಕರಾದ ಆರ್.ವಿ. ಶಿರಸಾಲಿಮಠ, ಕಿರಣ್ ಶೆಟ್ಟಿ ಮತ್ತು ವ್ಯವಸ್ಥಾಪನಾ ಮಂಡಲಿಯ ಸದಸ್ಯರಾದ ಕೆ.ಎಂ. ಬಸವರಾಜ್, ಶ್ರೀಮತಿ ಜಿ.ಸಿ. ವಸುಂಧರ, ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ ಹಾಗೂ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಎನ್. ತುಳಸಿನಾಥ್, ಉಪ ಪ್ರಧಾನ ವ್ಯವಸ್ಥಾಪಕರಾದ ಕೆ.ಎಂ. ರುದ್ರಮುನಿ ಮತ್ತು ಕೆ.ಎಂ. ನಟರಾಜ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸಿ



ದಾವಣಗೆರೆ, ಮೇ 26- ನಗರದ ನಮನ ಅಕಾಡೆಮಿ ಹಾಗೂ ಶ್ರೀಲಂಕಾದ ಬೆಸಿಲಿಕ ಸ್ಪೋರ್ಟ್ಸ್ ಅಂಡ್ ಲೀಶರ್ ಜಂಟಿಯಾಗಿ ಸ್ಥಳೀಯ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿನ ಎಸ್.ಎಸ್.ಮಲ್ಲಿಕಾರ್ಜುನ್ ಸಾಂಸ್ಕೃತಿಕ ಭವನದಲ್ಲಿ ಇಂಡೋ - ಶ್ರೀಲಂಕಾ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮವು ಮೊನ್ನೆ ನಡೆಯಿತು.

## ನಗರಸಭೆ ಮಾಜಿ ಅಧ್ಯಕ್ಷ ಆರ್.ಹೆಚ್. ನಾಗಭೂಷಣ್ ಕರೆ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಗರಸಭೆ ಮಾಜಿ ಅಧ್ಯಕ್ಷರೂ, ಸಾಂಸ್ಕೃತಿಕ ಪ್ರೋತ್ಸಾಹಕರೂ ಆದ ಆರ್.ಎಚ್. ನಾಗಭೂಷಣ್ ಮಾತನಾಡಿ, ಇಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದು ತುಂಬಾ ಕಷ್ಟಕರ ಕೆಲಸ. ಒಳ್ಳೆಯ ಕಾರ್ಯಕ್ರಮಗಳಿಗೆ ನಾವು ಸದಾ ಬೆನ್ನೆಲುಬಾಗಿ ನಿಲ್ಲುತ್ತೇವೆ. ಇಂತಹ ಕಾರ್ಯಕ್ರಮಗಳು ದಾವಣಗೆರೆಯಲ್ಲಿ ಇನ್ನೂ ಹೆಚ್ಚು ಹೆಚ್ಚು ನಡೆಯಲಿ ಎಂದು ಆಶಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವ ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ನಂತರ, ಶ್ರೀಲಂಕಾ ಹಾಗೂ ಭಾರತೀಯ ಶಾಸ್ತ್ರೀಯ, ಲಘು ಶಾಸ್ತ್ರೀಯ ನೃತ್ಯ ಪ್ರಸ್ತುತಿಗಳು ಸಭಾಸದರ ಮನಸೂರೆಗೊಳಿಸಿದವು.

# 80 ಸಾವಿರ ಕೋಟಿ ರೂ.ಗಳ ಕ್ಲೇಮು ಬಾಕಿ

ನೋಯ್ಡಾ, ಮೇ 26 - 10,46,163 ಮೋಟಾರ್ ಅಪಘಾತ ಕ್ಲೇಮುಗಳ ಪ್ರಕರಣಗಳು ದೇಶಾದ್ಯಂತ ಬಾಕಿ ಇವೆ. ಇವುಗಳ ಸಂಖ್ಯೆ 2018-19ರಿಂದ 2022-23ರ ನಡುವೆ ನಿರಂತರವಾಗಿ ಏರಿಕೆಯಾಗಿದೆ ಎಂದು ಮಾಹಿತಿ ಹಕ್ಕು ಅರ್ಜಿಯೊಂದಕ್ಕೆ ತಿಳಿಸಲಾಗಿದೆ.

ಸುಪ್ರೀಂ ಕೋರ್ಟ್ ವಕೀಲ ಕೆ.ಸಿ. ಜೈನ್ ದಾಖಲಿಸಿದ ಅರ್ಜಿಗೆ ವಿಮಾ ನಿಯಂತ್ರಣ ಪ್ರಾಧಿಕಾರವಾದ ಐ.ಆರ್.ಡಿ.ಐ.ಎ. ಈ ಮಾಹಿತಿ ನೀಡಿದೆ.

ಐ.ಆರ್.ಡಿ.ಐ.ಎ. ನೀಡಿರುವ ಮಾಹಿತಿಯ ಪ್ರಕಾರ, ದೇಶಾದ್ಯಂತ ಬಾಕಿ ಇರುವ ಅಪಘಾತ ಪ್ರಕರಣಗಳ ಕ್ಲೇಮುಗಳ ಮೊತ್ತ 80,455 ಕೋಟಿ ರೂ. ಆಗಿದೆ.

2018-19ರಲ್ಲಿ 9.09 ಲಕ್ಷ ಪ್ರಕರಣಗಳು ಬಾಕಿ ಇದ್ದವು. ಬಾಕಿ ಇದ್ದ ಕ್ಲೇಮುಗಳ ಮೊತ್ತ 52,713 ಕೋಟಿ ರೂ. ಆಗಿತ್ತು.

ವರ್ಷದಿಂದ ವರ್ಷಕ್ಕೆ ಬಾಕಿ ಇರುವ ಕ್ಲೇಮುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅಪಘಾತಕ್ಕೆ ಗುರಿಯಾದವರು ಹಾಗೂ ಅವರ ಅವಲಂಬಿತರಿಗೆ ನೆರವು ವಿಳಂಬವಾಗುತ್ತಿದೆ ಎಂದು ವಕೀಲ ಜೈನ್ ಹೇಳಿದ್ದಾರೆ.

ನೆರವು ವಿಳಂಬವಾಗುತ್ತಿರುವ ಕಾರಣ, ಮಧ್ಯಂತರ ನೆರವಿನ ಯೋಜನೆ ಜಾರಿಗೆ ತರುವ ಅಗತ್ಯವಿದೆ. ಸಾವಿನ ಪ್ರಕರಣಗಳಲ್ಲಿ ಕನಿಷ್ಠ 5 ಲಕ್ಷ ರೂ. ಹಾಗೂ ಗಾಯಾಳುಗಳ ಪ್ರಕರಣಗಳಲ್ಲಿ 2.50 ಲಕ್ಷ ರೂ. ನೀಡಬೇಕಿದೆ ಎಂದವರು ತಿಳಿಸಿದ್ದಾರೆ.

# ಸಿರಿಗೆರೆ ನ್ಯಾಯಪೀಠಕ್ಕೆ ಇಂದು ಬಿಡುವು



ಸಿರಿಗೆರೆ ತರಳಬಾಳು ಬೃಹನ್ಮಠದಲ್ಲಿ ಇಂದು ನಡೆಯಬೇಕಿದ್ದ ಸದ್ಧರ್ಮ ನ್ಯಾಯಪೀಠದ ಕಾರ್ಯ ಕಲಾಪಗಳನ್ನು ಮುಂದೂಡಲಾಗಿದೆ.

ಮಸ್ಕತ್ ಮತ್ತು ದುಬೈಗಳಲ್ಲಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮಗಳಲ್ಲಿ ಜಗದ್ಗುರು ಡಾ|| ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಪ್ರವಾಸ ಕೈಗೊಂಡಿರುವ ಕಾರಣ, ನ್ಯಾಯಪೀಠದ ಕಾರ್ಯ ಕಲಾಪಗಳು ನಡೆಯುವುದಿಲ್ಲ ಎಂದು ನ್ಯಾಯಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ.

# ಆಸ್ಪತ್ರೆ ಬೆಂಕಿಯಲ್ಲಿ ಏಳು ಶಿಶುಗಳ ಸಾವು

ನವದೆಹಲಿ, ಮೇ 26 - ದೆಹಲಿಯ ವಿವೇಕ್ ವಿಹಾರದ ಮಕ್ಕಳ ಖಾಸಗಿ ಆಸ್ಪತ್ರೆಯಲ್ಲಿ ಭಾರೀ ಬೆಂಕಿ ಕಾಣಿಸಿಕೊಂಡಿದ್ದು, ಏಳು ಶಿಶುಗಳು ಮೃತಪಟ್ಟಿದ್ದಾರೆ.

ಆಸ್ಪತ್ರೆಯ ನವಜಾತ ಶಿಶುಗಳ ಘಟಕದಲ್ಲಿ ಶನಿವಾರ ರಾತ್ರಿ 11.30ಕ್ಕೆ ಬೆಂಕಿ ಕಾಣಿಸಿಕೊಂಡಿದೆ. ನಂತರ ಪಕ್ಕದ ಎರಡು ಕಟ್ಟಡಗಳಿಗೆ ಬೆಂಕಿ ಹರಡಿದೆ.16 ಅಗ್ನಿಶಾಮಕ ವಾಹನಗಳನ್ನು ಬಳಸಿ ಬೆಂಕಿ ನಂದಿಸಲಾಗಿದೆ. ಬೆಂಕಿ ವೇಳೆ ಆಕ್ಸಿಜನ್ ಸಿಲಿಂಡರ್‌ಗಳು ಸ್ಫೋಟಗೊಂಡು, ಪಕ್ಕದ ಕಟ್ಟಡಗಳಿಗೆ ಹಾನಿಯಾಗಿದೆ.

## ಡಾ. ಎನ್.ಆರ್. ಚಂದ್ರಪ್ಪ ನಿಧನ



ದಾವಣಗೆರೆ ನಗರ ಎಂಸಿಸಿ 'ಬಿ' ಬ್ಲಾಕ್, 7ನೇ ಮುಖ್ಯರಸ್ತೆ,
5ನೇ ತಿರುವು ಡೋ ನಂ. 3000/2 ವಾಸಿ
**ಡಾ. ಎನ್. ಆರ್. ಚಂದ್ರಪ್ಪ** ಇವರು
ದಿನಾಂಕ 25-05-2024ರ ಬೆಳಿಗ್ಗೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ 27-05-2024ರ ಸೋಮವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 12ರವರೆಗೆ ಮೃತರ ಸ್ವಗೃಹದಲ್ಲಿ ಇರಿಸಲಾಗುವುದು. ನಂತರ ಮೃತರ ಸ್ವಗ್ರಾಮವಾದ ತಾವರೆಕೆರೆಯಲ್ಲಿ ಮಧ್ಯಾಹ್ನ 3.30ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :
ಶ್ರೀಮತಿ ಶಾಂತಾ ಎನ್.ಆರ್. ಚಂದ್ರಪ್ಪ ಮತ್ತು ಮಕ್ಕಳು, 94488 39266









KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas